# ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2213

ಸದಸ್ಯರ ಹೆಸರು : ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 26.03.2021

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯಾಂತ್ರೀಕೃತ ಕೃಷಿಗಾಗಿ ಇಲಾಖೆಯಲ್ಲಿ ಜಾರಿಯಲ್ಲಿರುವ ವಿವಿಧ ಯೋಜನೆ/ಕಾರ್ಯಕ್ರಮಗಳಾವುವು; (ಯೋಜನೆಯ ಮಾರ್ಗಸೂಚಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಯಾಂತ್ರೀಕೃತ ಕೃಷಿಗಾಗಿ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆ/ಕಾರ್ಯಕ್ರಮಗಳು ಈ ಕೆಳಕಂಡಂತಿದೆ.<br>• ರಾಜ್ಯ ವಲಯ ಕೃಷಿ ಯಾಂತ್ರೀಕರಣ<br>• ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ<br>• ಅನುಸೂಚಿತ ಜಾತಿ ಮತ್ತು ಬುಡಕಟ್ಟು ಕಾಯಿದೆ ಕಾರ್ಯಕ್ರಮ<br>• ಕೃಷಿ ಉತ್ಪನ್ನಗಳ ಸಂಸ್ಕರಣಾ ಯೋಜನೆ<br>• ಕೃಷಿ ಯಂತ್ರಧಾರೆ ಯೋಜನೆ<br>• ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ<br>ಯೋಜನಾವಾರು ಮಾರ್ಗಸೂಚಿಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಆ) | ಕಳೆದ 3 ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಯಾಂತ್ರೀಕೃತ ಕೃಷಿ ಯೋಜನೆಗಳಲ್ಲಿ ನಿಗದಿಪಡಿಸಿದ ಫಲಾನುಭವಿಗಳ ಗುರಿ, ಆರ್ಥಿಕ, ಭೌತಿಕ ಸಾಧನೆ ಬಾಕಿಯೆಷ್ಟು; (ತಾಲ್ಲೂಕುವಾರು, ಗ್ರಾಮವಾರು, ಯೋಜನೆವಾರು ಮಾಹಿತಿ ನೀಡುವುದು) | ಕಳೆದ 3 ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಯಾಂತ್ರೀಕೃತ ಕೃಷಿ ಯೋಜನೆಗಳಲ್ಲಿ ನಿಗದಿಪಡಿಸಿದ ಫಲಾನುಭವಿಗಳ ಗುರಿ, ಆರ್ಥಿಕ, ಭೌತಿಕ ಸಾಧನೆ ಮತ್ತು ಬಾಕಿಯಿರುವ ತಾಲ್ಲೂಕುವಾರು, ಯೋಜನೆವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br>ವಿವಿಧ ಯೋಜನೆಗಳಡಿ ನಿಗದಿಪಡಿಸಿದ ಗುರಿಯನ್ನು ತಾಲ್ಲೂಕುವಾರು ಕ್ರಿಯಾಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಹೋಬಳಿ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹೋಬಳಿ ವ್ಯಾಪ್ತಿಯ ಗ್ರಾಮಮಟ್ಟದಲ್ಲಿ ಯೋಜನೆಗಳ ಕುರಿತು ರೈತರಿಗೆ ಪ್ರಚಾರ ನೀಡಿ ರೈತರಿಂದ ಸ್ವೀಕೃತವಾಗುವ ಅರ್ಜಿಗನುಗುಣವಾಗಿ ಯೋಜನಾ ಗುರಿ/ |

| | | |
|---|---|---|
| | | ಅನುದಾನ ಬಿಡುಗಡೆ ಮಿತಿಗೊಳಪಟ್ಟು ಕಾರ್ಯಕ್ರಮವನ್ನು ಅನುಷ್ಠಾನ ಮಾಡಿ ಪ್ರಗತಿ ಸಾಧಿಸಲಾಗುತ್ತಿದೆ. ಯೋಜನಾವಾರು/ಗ್ರಾಮವಾರು ಪ್ರತ್ಯೇಕವಾಗಿ ಕ್ರಿಯಾಯೋಜನೆ/ಗುರಿ ನಿಗದಿಪಡಿಸಿಕೊಂಡು ಕಾರ್ಯಕ್ರಮವನ್ನು ಪ್ರಸ್ತುತ ಅನುಷ್ಠಾನ ಮಾಡಲಾಗುತ್ತಿಲ್ಲ. |
| ಇ) | ಕೃಷಿ ಕೂಲಿ ಕಾರ್ಮಿಕರ ಕೊರತೆಯ ಹಿನ್ನೆಲೆಯಲ್ಲಿ, ಯಾಂತ್ರೀಕೃತ ಕೃಷಿಗೆ ಹೆಚ್ಚು ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಮುಂದಿನ ಯೋಜನೆಗಳಾವುವು? | ➢ ರಾಜ್ಯದಲ್ಲಿ ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ ಹಾಗು ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.<br>➢ ಕೃಷಿ ಯಾಂತ್ರೀಕರಣ ಯೋಜನೆಯಡಿ ರೈತರಿಗೆ 25 PTO HP ವರೆಗಿನ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಜೊತೆಗೆ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್‌ಸೆಟ್ ಗಳು ಇತ್ಯಾದಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗು ಕೊಯ್ಲು ನಂತರ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ.<br>➢ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ರೈತರಿಗೆ ಶೇ.50 ರಷ್ಟು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ಗರಿಷ್ಠ ಒಂದು ಲಕ್ಷದ ಮಿತಿಯೊಳಗೆ ಸಹಾಯಧನವನ್ನು ನೀಡಲಾಗುತ್ತಿದೆ. ಸಣ್ಣ ಟ್ರಾಕ್ಟರ್ ಗಳಿಗೆ (25 ಪಿ.ಟಿ.ಒ ಹೆಚ್.ಪಿ ವರೆಗೆ) ಸಾಮಾನ್ಯ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಸಹಾಯಧನ ನೀಡಲಾಗುತ್ತಿದೆ.<br>➢ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗು ಕಡಿಮೆ ಬಾಡಿಗೆ ದರದಲ್ಲಿ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ನೀಡಲು ಹೋಬಳಿಗೊಂದರಂತೆ ಶೇ.70 ರ ಸಹಾಯಧನ ಒದಗಿಸಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಕೇಂದ್ರಗಳನ್ನು ತೆರೆಯಲಾಗಿದೆ. |

| | | |
|---|---|---|
| | | ಪ್ರಸಕ್ತ 672 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಯೋಜನೆಯಡಿ ಇಲ್ಲಿಯವರೆಗೆ ಅಂದಾಜು 16.22 ಲಕ್ಷ ರೈತರು ಪ್ರಯೋಜನ ಪಡೆದಿರುತ್ತಾರೆ.<br>➢ ಮುಂದುವರೆದು, ಗ್ರಾಮ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಹೆಚ್ಚಿಸಲು ಶೇ.80 ರ ಸಹಾಯಧನದಡಿ ಪ್ರತಿ ಕೃಷಿ ಯಾಂತ್ರೀಕರಣ ಬ್ಯಾಂಕ್‌ಗೆ ಗರಿಷ್ಠ ರೂ.8.00 ಲಕ್ಷ ಸಹಾಯಧನ ಒದಗಿಸಿ ಕೃಷಿ ಯಂತ್ರೋಪಕರಣಗಳ ಬ್ಯಾಂಕ್‌ಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹೆಚ್ಚು ಹೆಚ್ಚು ಫಲಾನುಭವಿಗಳು ಯಾಂತ್ರೀಕೃತ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಯಿಸಲು ಕೇಂದ್ರ ಪುರಸ್ಕೃತ SMAM ಯೋಜನೆಯಡಿ ಗ್ರಾಮ/ ಗ್ರಾಮ ಪಂಚಾಯತಿ ಮಟ್ಟದಲ್ಲಿ 216 ಕೃಷಿ ಯಂತ್ರೋಪಕರಣಗಳ ಬ್ಯಾಂಕ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: AGRI-ASC/35/2021

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

ಅ). ಕೃಷಿ ಯಾಂತ್ರೀಕರಣ ಯೋಜನೆ:

ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗು ಕೃಷಿಯಲ್ಲಿ ಯಾಂತ್ರೀಕರಣವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸಲು "ಕೃಷಿ ಯಾಂತ್ರೀಕರಣ ಯೋಜನೆಯಡಿ" ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ರೂ. ಒಂದು ಲಕ್ಷದವರೆಗೆ ಮಿತಿಗೊಳಿಸಲಾಗಿದೆ (ಸಣ್ಣ ಟ್ರಾಕ್ಟರ್ ಗಳಿಗೆ ಸಾಮಾನ್ಯ ರೈತರಿಗೆ ರೂ.75,000/- ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ರೂ.3.00 ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ). 2020-21 ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಉಳುಮೆಯಿಂದ ಕೊಯ್ಲುವರೆಗೆ ಉಪಯುಕ್ತವಿರುವ ವಿವಿಧ ಮಾದರಿಯ ಸಣ್ಣ ಟ್ರಾಕ್ಟರ್ ಗಳು, ಪವರ್ ಟಿಲ್ಲರ್‌ಗಳು, ಭೂಮಿ ಸಿದ್ಧತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸಲ್ ಪಂಪ್‌ಸೆಟ್, ಟ್ರಾಕ್ಟರ್ / ಟಿಲ್ಲರ್ / ಎಂಜಿನ್ ಚಾಲಿತ ಸಸ್ಯ ಸಂರಕ್ಷಣಾ, ಬೆಳೆ ಕಟಾವು / ಒಕ್ಕಣೆ ಯಂತ್ರಗಳು, ತ್ಯಾಜ್ಯ ವಸ್ತುಗಳ ನಿರ್ವಹಣ ಉಪಕರಣಗಳನ್ನು ಸಹಾಯಧನದಡಿ ವಿತರಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

<u>ಮುಖ್ಯವಾದ ಸೂಚನೆಗಳು:</u>

1. **ದಿ. 01.04.2020 ರ ನಂತರ ಖರೀದಿಸಿದ ಉಪಕರಣಗಳಿಗೆ ಮಾತ್ರ ಸಹಾಯಧನವನ್ನು ನೀಡುವುದು.**
2. ಕೃಷಿ ಯಂತ್ರೋಪಕರಣಗಳನ್ನು ಹಾಗೂ ಕೃಷಿ ಸಂಸ್ಕರಣಾ ಘಟಕಗಳನ್ನು ವಿತರಿಸುವಾಗ ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆ / ರಾಷ್ಟ್ರೀಯ ಆಹಾರ ಭದ್ರತೆ ಯೋಜನೆ ಮತ್ತು ರಾಜ್ಯ ವಲಯದ ಯೋಜನೆಗಳನ್ನು ಹೊಂದಾಣಿಕೆ ಮಾಡಿಕೊಂಡು ಅನುಷ್ಠಾನಗೊಳಿಸುವುದು. **SMAM ಯೋಜನೆಯ ಮಾರ್ಗಸೂಚಿಯಲ್ಲಿರುವ ಕೃಷಿ ಯಂತ್ರೋಪಕರಣಗಳಿಗೆ ಮಾತ್ರ SMAM ಯೋಜನೆಯಡಿ ಸಹಾಯಧನ ಒದಗಿಸುವುದು.**
3. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ಕೃಷಿ ಯಂತ್ರೋಪಕರಣಗಳಿಗೆ ಪ.ಜಾ, ಪ.ಪಂ, ಸಣ್ಣ, ಅತಿ ಸಣ್ಣ ಮತ್ತು ಮಹಿಳ ವರ್ಗದ ರೈತರಿಗೆ ಶೇ. 50 ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ಶೇ. 40ರಷ್ಟು ಅಥವಾ ನಿಗದಿಪಡಿಸಿದ ಗರಿಷ್ಠ ಸಹಾಯಧನ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸುವುದು.
4. ಕೇಂದ್ರ ಪುರಸ್ಕೃತ ಯೋಜನೆಗಳ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಕ್ರಿಯಾಯೋಜನೆಯ ಪ್ರಕಾರ ಮೊದಲು ಅನುಷ್ಠಾನಗೊಳಿಸಿ ಇದಕ್ಕೆ ಸಂಬಂಧಿಸಿದ ಪೂರಕ ಅನುದಾನವನ್ನು ರಾಜ್ಯ ವಲಯ ಯೋಜನೆಗಳಡಿ ಭರಿಸುವುದು.

5. ವಿತರಿಸಲ್ಪಡುವ ಸವಲತ್ತು / ಉಪಕರಣಗಳು, ಕೇಂದ್ರ ಪುರಸ್ಕೃತ ಯೋಜನೆಗಳಡಿ ವಿತರಿಸಲು ಅವಕಾಶವಿದ್ದಲ್ಲಿ, ಆದ್ಯತೆ ಮೇರೆಗೆ ಕ್ರಿಯಾ ಯೋಜನೆಯ ಪ್ರಕಾರ ವಿತರಿಸಿ, [illegible] ಪೂರಕ / ಹೊಂದಾಣಿಕೆ ಅನುದಾನವನ್ನು ರಾಜ್ಯವಲಯ ಯೋಜನೆಯಡಿ ಸಮನ್ವಯಗೊಳಿಸಿ ಪ್ರಗತಿ ಸಾಧಿಸುವುದು. **ಯಾವುದೇ ಕಾರಣಕ್ಕೆ ಕೇಂದ್ರ ಪುರಸ್ಕೃತ ಯೋಜನೆಗಳ ಕಾರ್ಯಕ್ರಮಗಳ ಅನುಷ್ಠಾನವನ್ನು ವಿಳಂಬಗೊಳಿಸಿ ರಾಜ್ಯವಲಯ ಅನುದಾನವನ್ನು ಒಂದೇ ಬಿಲ್ಲಿನಲ್ಲಿ ವೆಚ್ಚ ಭರಿಸಬಾರದು.**
6. 2019-20ನೇ ಸಾಲಿನ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳಾದ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM), ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (NFSM) ಗಳಡಿ ಹಾಗೂ ಇತರೆ ಕೇಂದ್ರ ಪುರಸ್ಕೃತ ಯೋಜನೆಗಳಡಿ ಹೊಂದಾಣಿಕೆ ಮಾಡಿಕೊಂಡು ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳಿಗೆ ರಾಜ್ಯವಲಯದ ಅನುದಾನ ಕೊರತೆಯಿಂದ ಬಾಕಿ ಇರುವ ಬಿಲ್ಲುಗಳು ಹಾಗು ಪಾವತಿಸಬಹುದಾದ ಬಾಕಿ ಸಹಾಯಧನದ ವಿವರಗಳನ್ನು ನಿಗಧಿತ ನಮೂನೆಗಳಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸಿ, ಅನುಮತಿ ಪಡೆದ ನಂತರ ಆದ್ಯತೆ ಮೇರೆಗೆ ಜೇಷ್ಠತೆ ಆಧಾರದ ಮೇಲೆ ನಿಯಾಮಾನುಸಾರ ಸಹಾಯಧನವನ್ನು ಪ್ರಸಕ್ತ ಸಾಲಿನ ರಾಜ್ಯ ವಲಯ ಯೋಜನೆಗಳಡಿ (ಲೆಕ್ಕ ಶೀರ್ಷಿಕೆ : 2401-00-103-0-15 ಅಥವಾ 2401-00-103-1-75) ಪಾವತಿಸುವುದು. ಬಾಕಿ ಇರುವ ಬಿಲ್ಲುಗಳನ್ನು ತೀರುವಳಿಗೊಳಿಸದೇ ಹೊಸ ಬಿಲ್ಲುಗಳನ್ನು ಪರಿಗಣಿಸಬಾರದು.
7. 2020-21 ನೇ ಸಾಲಿನ SMAM ಯೋಜನೆ ಮತ್ತು ರಾಜ್ಯವಲಯ ಯೋಜನೆಗಳಡಿ ಜಿಲ್ಲಾವಾರು ನಿಗಧಿಪಡಿಸಿರುವ ವಾರ್ಷಿಕ ಕಾರ್ಯಕ್ರಮಕ್ಕೆ ಶೇ.50 ರಷ್ಟು ಮೊತ್ತಕ್ಕೆ ಮಾತ್ರ ಕಾರ್ಯಾದೇಶ ನೀಡುವುದು ಹಾಗೂ ಅನುದಾನ ಬಿಡುಗಡೆಯಾದ ನಂತರ ನಿಯಮಾನುಸಾರ ಸಹಾಯಧನವನ್ನು ಪಾವತಿಸಲು ಕ್ರಮಕೈಗೊಳ್ಳುವುದು. ನಿಗದಿಪಡಿಸಿದ ವಾರ್ಷಿಕ ಕಾರ್ಯಕ್ರಮಕ್ಕಿಂತ ಹೆಚ್ಚಾಗಿ ಪೂರ್ವಾನುಮತಿ ಇಲ್ಲದೆ ಅನುಷ್ಠಾನ ಮಾಡಿದ್ದಲ್ಲಿ, ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಯು ಜವಾಬ್ದಾರರಾಗುತ್ತಾರೆ. ಜಿಲ್ಲೆಗೆ ನೀಡಿರುವ ಅನುಮೋದಿತ ಕಾರ್ಯಕ್ರಮದಲ್ಲಿ ಅಂತರಘಟಕ ಬದಲಾವಣೆ ಮಾಡಬೇಕಿದ್ದಲ್ಲಿ ಕೇಂದ್ರ ಕಛೇರಿಯ ಮುಖ್ಯಸ್ಥರ ಪೂರ್ವಾನುಮತಿ ಪಡೆದು ಕಾರ್ಯಕ್ರಮ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವುದು. ಯಾವುದೇ ಕಾರಣಕ್ಕೂ ಕ್ರಿಯಾ ಯೋಜನೆ ಮೀರಿ ಅನುಷ್ಠಾನ ಮಾಡಿದ್ದಲ್ಲಿ ಸಂಬಂದಪಟ್ಟ ಜಂಟಿ ಕೃಷಿ ನಿರ್ದೇಶಕರುಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
8. 2020-21 ನೇ ಸಾಲಿನಲ್ಲಿ, 2019-20ನೇ ಸಾಲಿನಲ್ಲಿ ನಿಯಮಾನುಸಾರ ಕ್ರಮಬದ್ಧವಾಗಿ ಸ್ವೀಕರಿಸಿದ (ಬಾಕಿ)ಅರ್ಜಿಗಳಿಗೆ ಮೊದಲು ಜ್ಯೇಷ್ಠತೆ ಆಧಾರದ ನಿಯಾಮಾನುಸಾರ ಸಹಾಯಧನ ನೀಡುವುದು.
9. 2020-21 ನೇ ಸಾಲಿಗೆ ನೀಡುವ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನಿಗಧಿಪಡಿಸಿರುವ ಅನುದಾನದಂತೆ ನಿಯಮಾನುಸಾರ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಮಹಿಳಾ (ಶೇ.33ರಷ್ಟು) ಮತ್ತು ಅಲ್ಪ ಸಂಖ್ಯಾತರ (ಶೇ.15 ರಷ್ಟು)

ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಆದ್ಯತೆ ಮೇರೆಗೆ ಪರಿಗಣಿಸುವುದು. ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಒದಗಿಸಲಾಗಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಅನ್ಯವರ್ಗದ ರೈತರಿಗೆ ಸಹಾಯಧನ ಒದಗಿಸಲು ಬಳಸಿಕೊಳ್ಳುವಂತಿಲ್ಲ.

10. **ಪ್ರಸಕ್ತ ಸಾಲಿನ ರಾಜ್ಯವಲಯ ಲೆ.ಶೀ: 2401-00-103-0-15 ಮತ್ತು 2401-00-001-1-75 ರಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಪಯೋಜನೆಯಡಿ ಒದಗಿಸಲಾಗುವ ಅನುದಾನವನ್ನು 2019-20 ನೇ ಸಾಲಿನಲ್ಲಿ ಕೇಂದ್ರವಲಯದ ಲೆಕ್ಕ ಶೀರ್ಷಿಕೆಯಡಿ ವೆಚ್ಚ ಭರಿಸಿ ರಾಜ್ಯವಲಯದಡಿ ಬಾಕಿ ಉಳಿದಿರುವ ಅರ್ಜಿಗಳಿಗೆ ನಿಯಾಮಾನುಸಾರ ಪೂರಕ ಅನುದಾನವನ್ನಾಗಿ ಬಳಸಿಕೊಳ್ಳವುದು. ಒಂದು ವೇಳೆ ಅನುದಾನ ಉಳಿಕೆಯಾದಲ್ಲಿ ಇಲಾಖೆಯ ಅನುಮತಿ ಪಡೆಯದೆ ಸದರಿ ಅನುದಾನವನ್ನು ಬಳಸಿಕೊಳ್ಳಲು ಅವಕಾಶವಿರುವುದಿಲ್ಲ. ಅಲ್ಲದೆ ಯಾವುದೇ ಕಾರಣಕ್ಕೂ ಒಂದೇ ಬಿಲ್ಲಿನಲ್ಲಿ ವೆಚ್ಚ ಭರಿಸಬಾರದು. ಆದ ಕಾರಣ ಪ್ರಸಕ್ತ ಸಾಲಿಗೆ ಯಾವುದೇ ಕ್ರಿಯಾ ಯೋಜನೆಯನ್ನು ನೀಡಿರುವುದಿಲ್ಲ.**

11. ಸರ್ಕಾರದ ಆದೇಶ ಸಂ: ಕೃಇ 63 ಕೃಮಸ 2015 ದಿ: 16.05.2015 ಹಾಗು ತಿದ್ದುಪಡಿ ಆದೇಶ ದಿನಾಂಕ: 05.09.2015 ರ ಅನ್ವಯ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನವನ್ನು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ರೂ. ಒಂದು ಲಕ್ಷದವರೆಗೆ ನೀಡಲಾಗುವುದು. ಮುಂದುವರೆದು **ರೂ.5.00 ಲಕ್ಷದವರೆಗೆ ಇರುವ ಕೃಷಿ ಯಂತ್ರೋಪಕರಣಗಳನ್ನು ಕಾನೂನಿನ್ವಯ ನೊಂದಾಯಿತ ರೈತ ಗುಂಪುಗಳಿಗೆ (Farmers Producer Organizations, Self-help Groups and Farmer Clubs, Raitha Shakthi groups/ Registered farmer organizations) ಹಾಗು ಎಲ್ಲಾ ತರಹದ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಒದಗಿಸುವುದು**

12. ಭಾರತ ಸರ್ಕಾರದಿಂದ ಹೊರಡಿಸಲಾಗುವ ಅನುಮೋದಿತ ಸಣ್ಣ ಟ್ರಾಕ್ಟರ್, ಪವರ್ ಟಿಲ್ಲರ್, ಕಂಬೈನ್ಡ್ ಹಾರ್ವೆಸ್ಟರ್, ಭತ್ತ ನಾಟಿ ಮಾಡುವ ಯಂತ್ರ, ಕಬ್ಬು ಕಟಾವು ಯಂತ್ರ, ರೀಪರ್ಸ್ / ರೀಪರ್ಸ್ ಕಮ್ ಬೈಂಡರ್, ಬೇಲರ್ಸ್ ಮತ್ತು ಲೇಸರ್ ಗೈಡೆಡ್ ಲ್ಯಾಂಡ್ ಲೆವೆಲರ್ಸ್ ಗಳ ಪಟ್ಟಿಗಳ ಅನ್ವಯ, ಕೇಂದ್ರ ಕಚೇರಿಯಿಂದ ಅನುಮೋದಿಸಲ್ಪಟ್ಟ ಉಪಕರಣಗಳ ಮಾದರಿಗಳಿಗೆ ಮಾತ್ರ ಸಹಾಯಧನ ಒದಗಿಸುವುದು. ಭಾರತ ಸರ್ಕಾರವು ಕಾಲ ಕಾಲಕ್ಕೆ ಪರಿಷ್ಕರಿಸಿದ ತಯಾರಿಕ ಸಂಸ್ಥೆವಾರು ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಕಂಬೈನ್ಡ್ ಹಾರ್ವೆಸ್ಟರ್‌ಗಳ ಮಾದರಿಗಳಿಗೆ ಮಾತ್ರ ಸಹಾಯಧನವನ್ನು ಒದಗಿಸುವುದು. ಸದರಿ ಅನುಮೋದಿಸಿದ ಪಟ್ಟಿಯ ಮಾಹಿತಿಯನ್ನು https://farmer.gov.in ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಅದರಂತೆ 2020–21 ನೇ ಸಾಲಿಗೆ ಕೃಷಿ ಯಾಂತ್ರೀಕರಣ ಸಹಾಯಧನ ಕಾರ್ಯಕ್ರಮದಡಿ ಹಾಗು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಕಂಬೈನ್ಡ್ ಹಾರ್ವೆಸ್ಟರ್‌ಗಳನ್ನು ಪೂರೈಸುವಾಗ ಭಾರತ ಸರ್ಕಾರದ ಇತ್ತೀಚಿನ ಅನುಮೋದಿತ ಪಟ್ಟಿ ಮತ್ತು ಇಲಾಖೆಯ ಎಂಪ್ಯಾನೆಲ್ ಪಟ್ಟಿಯಲ್ಲಿ ಅನುಮೋದನೆಗೊಂಡಿರುವ ಮೇಲ್ಕಂಡ ಯಂತ್ರೋಪಕರಣಗಳ ಮಾದರಿಗಳು ಭಾರತ

ಸರ್ಕಾರದ ಇತ್ತೀಚಿನ ಅನುಮೋದಿತ ಪಟ್ಟಿಯಲ್ಲಿ ಇದೆಯೇ ಇಲ್ಲವೇ ಎಂಬುದನ್ನು ಖಾತ್ರಿಪಡಿಸಿಕೊಂಡು ಅರ್ಹವಿರುವ ಮಾದರಿಗಳನ್ನು ಮಾತ್ರ ಸರಬರಾಜು ಮಾಡುವುದು. ಒಂದು ವೇಳೆ ಭಾರತ ಸರ್ಕಾರದ ಅನುಮೋದಿತ ಪಟ್ಟಿಯಲ್ಲಿದ್ದು, ಇಲಾಖೆಯ ದರಪಟ್ಟಿಯಲ್ಲಿ ಇಲ್ಲದಿದ್ದರೆ ಅಥವಾ ಇಲಾಖೆಯ ದರಪಟ್ಟಿಯಲ್ಲಿದ್ದು, ಭಾರತ ಸರ್ಕಾರದ ಅನುಮೋದಿತ ಪಟ್ಟಿಯಲ್ಲಿರದಿದ್ದರೆ ಅಂತಹ ಮಾದರಿಗಳಿಗೆ ಸಹಾಯಧನ ಒದಗಿಸಲು ಅವಕಾಶವಿರುವುದಿಲ್ಲ.

13. ಕೃಷಿ ಯಾಂತ್ರೀಕರಣ ಸಹಾಯಧನ ಕಾರ್ಯಕ್ರಮದಡಿ ಒದಗಿಸಬಹುದಾದ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳ ವಿವರಗಳುಳ್ಳ ಸರಬರಾಜುದಾರರ ಎಂಪ್ಯಾನೆಲ್ ಪಟ್ಟಿ ಹಾಗು ಸಹಾಯಧನದ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವ ಹಾಗು ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ ಖರೀದಿಸಿದ ಕೃಷಿ ಯಂತ್ರೋಪಕರಣಗಳ ಮಾದರಿಗಳು ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ. (ಸುತ್ತೋಲೆ ಸಂ:ಉಕೃನಿ/ಕೃಯಾಂ&ಸೂನೀ/ಕೃಯಾಂ/ಎಂ.ಪ್ಯಾ/2016-17 ದಿನಾಂಕ:17.03.2017) ಈ ಎಂಪ್ಯಾನೆಲ್ ಪಟ್ಟಿಯ ಅವಧಿಯು ಮುಂದಿನ ಎಂಪ್ಯಾನೆಲ್ ಪಟ್ಟಿ ಬರುವರೆಗೂ ಚಾಲ್ತಿಯಲ್ಲಿರುವುದು.

14. ರೈತರು ಇಚ್ಛೆ ಪಡುವ ಕೃಷಿ ಯಂತ್ರೋಪಕರಣಗಳನ್ನು ಕೇಂದ್ರ ಕಚೇರಿಯಿಂದ ಅನುಮೋದನೆಯಾಗಿರುವ ಸಂಸ್ಥೆಗಳಿಂದ ಪ್ರಚಲಿತವಿರುವ ಮಾರುಕಟ್ಟೆ ದರ / ಅನುಕೂಲಕರ ದರದಲ್ಲಿ ಚೌಕಾಸಿ ಮಾಡಿ ಸವಲತ್ತನ್ನು ಪಡೆಯಲು ಸಂಪೂರ್ಣವಾಗಿ ಸ್ವತಂತ್ರರಿರುತ್ತಾರೆ.

15. ಸರಬರಾಜುದಾರರು ಟೆಂಡರ್ / EOI / RFP ನಲ್ಲಿ ಸೂಚಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳನ್ನು ಸರಬರಾಜು ಮಾಡುವುದು. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮವಹಿಸುವುದು.

16. ಕೃಷಿ ಯಂತ್ರೋಪಕರಣಗಳ ಗುಣ ವೈಶಿಷ್ಟತೆ ಬಗ್ಗೆ ಪರೀಕ್ಷಿಸಲು ಹಾಗು ರೈತರಿಂದ ಅಹವಾಲು ಬಂದಲ್ಲಿ ಯಂತ್ರೋಪಕರಣಗಳನ್ನು ಭಾರತ ಸರ್ಕಾರದ ಅನುಮೋದಿತ ಪರೀಕ್ಷ ಕೇಂದ್ರಗಳಿಗೆ ಪರೀಕ್ಷೆಗಾಗಿ ಕಳುಹಿಸಲು ಕ್ರಮ ವಹಿಸುವುದು. ಪರೀಕ್ಷೆ ಕೇಂದ್ರಗಳ ವಿವರಗಳಿಗೆ ಭಾರತ ಸರ್ಕಾರದ ವೆಬ್ ಸೈಟ್ https://farmer.gov.in ಪೋರ್ಟಲ್ ನಲ್ಲಿ ಪಡೆಯಬಹುದಾಗಿದೆ.

17. ಒಬ್ಬರಿಗೆ ಒಂದಕ್ಕಿಂತ ಹೆಚ್ಚಿನ ವಿವಿಧ (ಬೇರೆ ಬೇರೆ) ಸವಲತ್ತುಗಳನ್ನು ಪಡೆಯಲು ಅನುದಾನ ಲಭ್ಯತೆ ನೋಡಿಕೊಂಡು ಅವಕಾಶ ನೀಡುವುದು. ಪ್ರತಿ ಫಲಾನುಭವಿಗೆ ಆಯಾ ಆರ್ಥಿಕ ವರ್ಷದಲ್ಲಿ ಗರಿಷ್ಟ ಒಂದು ಲಕ್ಷ ಸಹಾಯಧನ ಮಿತಿಗೊಳಿಸಿ ಒಂದಕ್ಕಿಂತ ಹೆಚ್ಚಿನ ವಿವಿಧ (ಬೇರೆ ಬೇರೆ) ಬಗೆಯ ಉಪಕರಣ/ ಸವಲತ್ತುಗಳಿಗೆ ಸಹಾಯಧನ ಒದಗಿಸುವುದು. ಒಂದು ಉಪಕರಣವನ್ನು ಸಹಾಯಧನದಡಿ ಪಡೆದ ನಂತರ ಅದೇ ಉಪಕರಣವನ್ನು, ಮುಂದಿನ ಮೂರು ವರ್ಷಗಳವರೆಗೆ ಸಹಾಯಧನದಡಿ ಪಡೆಯಲು ಅವಕಾಶವಿರುವುದಿಲ್ಲ.

18. ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನಿರ್ವಹಿಸುವ ಜೇಷ್ಠತಾ ಪಟ್ಟಿ ಹಾಗೂ ವಾರ್ಷಿಕ ಕ್ರಿಯಾ ಯೋಜನೆ ಆಧಾರದ ಮೇಲೆ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಸಹಾಯಧನ ಪಾವತಿಸಲು ನಿಯಾಮಾನುಸಾರ ಕ್ರಮ ಕೈಗೊಳ್ಳುವುದು.

19. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ವಿತರಣೆ ಮಾಡಲಾದ ಕೃಷಿ ಯಂತ್ರೋಪಕರಣಗಳ ಜಿ.ಪಿ.ಎಸ್ ಛಾಯಾಚಿತ್ರಗಳನ್ನು ವರ್ಷಾವಾರು ಮತ್ತು ಘಟಕವಾರು ವಿಂಗಡಿಸಿ, ವರದಿಯ ಆಲ್ಬಂ (album) ಮಾಡಿ ಇಟ್ಟುಕೊಳ್ಳತಕ್ಕದ್ದು.

20. ಸಂಬಂಧಪಟ್ಟ ದರ ಕರಾರು ಹೊಂದಿರುವವರ ಜಿಲ್ಲಾ ಅಥವಾ ತಾಲ್ಲುಕು ಸೇವಾ ಕೇಂದ್ರಗಳ ಮಾಹಿತಿ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ಇಲಾಖೆಯಲ್ಲಿ ಇರುವಂತೆ ನೋಡಿಕೊಳ್ಳವುದು ಮತ್ತು ರೈತರಿಗೆ ಅವಶ್ಯವಿರುವಾಗ ಮಾಹಿತಿ ನೀಡುವುದು.

21. ಈ ಯೋಜನೆಯಡಿ ಪ್ರತಿ ಮಾಹೆಯ ಅಂತ್ಯಕ್ಕೆ ವಿವಿಧ ಯೋಜನೆ/ಲೆಕ್ಕ ಶೀರ್ಷಿಕೆಗಳಡಿ ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪ್ರತ್ಯೇಕವಾಗಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು ಹಾಗೂ ಸದರಿ ಪ್ರಗತಿಯನ್ನು ಇಲಾಖೆಯ DSS ಪೋರ್ಟಲ್ ನಲ್ಲಿ ಮತ್ತು ವಿಭಾಗದಿಂದ ನೀಡುವ Google Spread Sheet ನಲ್ಲಿ ಅಪ್ಲೋಡ್ ಮಾಡುವುದು.

22. ವರ್ಷಾಂತ್ಯಕ್ಕೆ ಪ್ರಗತಿ ವರದಿಗಳೊಂದಿಗೆ ತಾಳೆಯಾಗುವ ಉಪಯೋಗಿತ ಪತ್ರಗಳನ್ನು ಪ್ರಗತಿ ವರದಿಯೊಂದಿಗೆ ಸಲ್ಲಿಸುವುದು.

23. ವಿವಿಧ ಕೃಷಿ ಯಾಂತ್ರೀಕರಣ ಯೋಜಗಳಡಿಯಲ್ಲಿ ವಿತರಿಸಿದ ಎಲ್ಲಾ ಘಟಕಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿಯು ಶೇ.100 ರಷ್ಟು ಪರಿಶೀಲನೆಯನ್ನು ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಅಪ್ ಲೋಡ್ ಮಾಡಿ ವಿತರಿಸುವುದು.

24. ಕೆ-ಕಿಸಾನ್ ಮೊಬೈಲ್ ಆಪ್ ಮುಖಾಂತರ ಅಪ್ ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ತದನಂತರ ರೈತರ ತೃಪ್ತಿಕರ ಪ್ರಮಾಣ ಪತ್ರವನ್ನು ಮತ್ತು ವರದಿಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸುವುದು. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಇಲಾಖೆಗೆ ಸಲ್ಲಿಕೆಯಾಗುವ ಅರ್ಜಿಗಳ ವಿವರಗಳನ್ನು ಪ್ರತ್ಯೇಕ ವಹಿಯಲ್ಲಿ ಜೇಷ್ಠತೆಗನುಣವಾಗಿ ನಿರ್ವಹಿಸುವುದು.

25. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ವಿವಿಧ ಕೃಷಿ ಯಾಂತ್ರೀಕರಣ ಯೋಜನೆಗಳಡಿಯಲ್ಲಿ ವಿತರಿಸಿದ ಘಟಕಗಳ ಕನಿಷ್ಟ ಶೇ.25 ರಷ್ಟನ್ನು, ವಿಭಾಗಗಳ ಉಪ ಕೃಷಿ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ವಿತರಿಸಿದ ಘಟಕಗಳ ಕನಿಷ್ಟ ಶೇ.7.5 ರಷ್ಟು ಮತ್ತು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಜಿಲ್ಲೆಯಲ್ಲಿ ವಿತರಿಸಿದ ಘಟಕಗಳ ಕನಿಷ್ಟ ಶೇ. 3ರಷ್ಟು ಪರಿಶೀಲನೆಯನ್ನು ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಅಪ್ ಲೋಡ್ ಮಾಡುವುದು.

26. ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಲಾದ ಅನುದಾನವನ್ನು ಎತ್ತುಚಾಲಿತ / ಮಾನವಚಾಲಿತ ಉಪಕರಣಗಳಿಗೆ ಆದ್ಯತೆ ಮೇರೆಗೆ ಸಹಾಯಧನ ಒದಗಿಸುವುದು ಅಥವಾ ಎತ್ತುಚಾಲಿತ / ಮಾನವಚಾಲಿತ ಉಪಕರಣಗಳಿಗೆ ಬೇಡಿಕೆ ಇಲ್ಲದ್ದಿದ್ದ ಪಕ್ಷದಲ್ಲಿ ಜಿಲ್ಲಾ ಪಂಚಾಯತ್ ಅನುಮೋದನೆ ಪಡೆದು ಕೃಷಿ ಯಂತ್ರೋಪಕರಣ ಮತ್ತು ಕೃಷಿ ಸಂಸ್ಕರಣಾ ಘಟಕಗಳಿಗೆ ನೀಡುವುದು.

27. ಕೃಷಿ ಯಂತ್ರೋಪಕರಣಗಳನ್ನು ರೈತರು ಸಹಾಯಧನದಡಿ ಖರೀದಿಸಲು ಅರ್ಜಿಯನ್ನು ಸಲ್ಲಿಸಿ ಇಲಾಖೆಯ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಇಲಾಖೆಯ ಗಮನಕ್ಕೆ ಬಾರದೆ, ಪೂರ್ವಾನುಮತಿ ಪಡೆಯದೆ ರೈತರು ಸ್ವಂತವಾಗಿ ಖರೀದಿಸಿದ ಉಪಕರಣಗಳಿಗೆ ಸಹಾಯಧನ ನೀಡಬಾರದು, ಈ ಬಗ್ಗೆ ರೈತರು, ರೈತ ಮುಖಂಡರು ಹಾಗೂ ಚುನಾಯಿತ ಜನಪ್ರತಿನಿಧಿಗಳಿಗೆ ಸಮಗ್ರವಾಗಿ ಮಾಹಿತಿಯನ್ನು ನೀಡುವುದರೊಂದಿಗೆ ವ್ಯಾಪಕವಾಗಿ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳುವುದು.

28. ಕೃಷಿ ಯಂತ್ರೋಪಕರಣ ಮತ್ತು ಕೃಷಿ ಸಂಸ್ಕರಣಾ ಘಟಕಗಳ ದರ ಕರಾರು/ EOI / RFP ನಲ್ಲಿ ನಿಬಂಧನೆಗ ಳನ್ವಯ ಅನುಮೋದನೆಗೊಂಡ ಸರಬರಾಜು ಸಂಸ್ಥೆಗಳು RFP ನ್ವಯ ಕೃಷಿ ಯಂತ್ರೋಪಕರಣಗಳನ್ನು ಸರಬರಾಜು ಮಾಡಬೇಕಾಗಿರುತ್ತದೆ. ನಿಬಂಧನೆಗಳು ಈ ಕೆಳಕಂಡಂತಿವೆ.

- ಸಹಾಯಕ ಕೃಷಿ ನಿರ್ದೇಶಕರಿಂದ ಕಾರ್ಯಾದೇಶ ಪಡೆದ ನಂತರ ಹತ್ತು ದಿನದೊಳಗೆ ಕೃಷಿ ಉಪಕರಣಗಳನ್ನು ಸರಬರಾಜು ಮಾಡಬೇಕು. ಒಂದು ವೇಳೆ ಇದೇ ರೀತಿ 10 ಬಾರಿ ಕಾರ್ಯಾದೇಶ ಪಡೆದು ಕೃಷಿ ಉಪಕರಣಗಳನ್ನು ಪೂರೈಸಲು ವಿಫಲವಾದ್ದಲ್ಲಿ, ಅಂತಹ ಸಂಸ್ಥೆಗಳ ಒಪ್ಪಂದ (Contract) ವನ್ನು ರದ್ದುಪಡಿಸಲಾಗುವುದು.
- ಅರ್ಹ ಸಂಸ್ಥೆಗಳು RFP ಯಲ್ಲಿ ನಿಗಧಿಪಡಿಸಿದ Specifications ಅನ್ವಯ ಉಪಕರಣಗಳನ್ನು ಪೂರೈಸತಕ್ಕದ್ದು ಮತ್ತು 15 ತಿಂಗಳ ಅವಧಿಗೆ Warranty ನೀಡಬೇಕಾಗಿರುತ್ತದೆ.
- ಒಂದು ವೇಳೆ ರೈತರಿಂದ ತಯಾರಿಕ ನ್ಯೂನ್ಯತೆಗಳು / ದೋಷಗಳು ಕಂಡು ಬಂದಿರುವುದಾಗಿ ವರದಿ ನೀಡಿದ್ದಲ್ಲಿ ಸಂಬಂಧಪಟ್ಟ ಸಂಸ್ಥೆಗಳು ಆ defected ಉಪಕರಣವನ್ನು ತೆಗೆದುಕೊಂಡು ಹೋಗಿ ರಿಪೇರಿ ಮಾಡಿಕೊಡುವುದು / ಬದಲಿಸಿ ಬೇರೆ ಉಪಕರಣವನ್ನು ನಿಗಧಿತ ಸ್ಥಳಕ್ಕೆ ನೀಡಬೇಕಾಗಿರುತ್ತದೆ.
- ರೈತರಿಗೆ ಬಿಡಿಭಾಗಗಳ ಅವಶ್ಯಕತೆ ಇದ್ದರೆ ಅರ್ಹ ಸಂಸ್ಥೆಗಳು ಒಪ್ಪಿದ ಬೆಲೆಗೆ Warranty ನೀಡಿ ಬಿಡಿ ಭಾಗಗಳನ್ನು ಪೂರೈಸ ತಕ್ಕದ್ದು.
- ಕೃಷಿ ಯಂತ್ರೋಪಕರಣಗಳ ತಯಾರಿಕಾ ನ್ಯೂನತೆಗಳೇನಾದರೂ ಬಂದಲ್ಲಿ ರೈತರು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಿಗೆ/ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳನ್ನು ಸಂಪರ್ಕಿಸಿ ದೂರನ್ನು ನೀಡಬಹುದು.

ಈ ಮೇಲಿನ ಎಲ್ಲಾ ನಿಬಂಧನೆಗಳನ್ನು ಸಂಸ್ಥೆಗಳು ಉಲ್ಲಂಘಿಸಿದ್ದಲ್ಲಿ, ಅಂತಹ ಸಂಸ್ಥೆಗಳನ್ನು ದರ ಕರಾರು/ EOI / RFP ಯಿಂದ ರದ್ದುಪಡಿಸಲು ಕೇಂದ್ರ ಕಚೇರಿಗೆ ಪ್ರಸ್ತಾವನೆ ಸಲ್ಲಿಸುವುದು.

29. ಕೃಷಿ ಯಂತ್ರೋಪಕರಣ, ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕ ಮತ್ತು ಲಘು ನೀರಾವರಿ ಉಪಕರಣಗಳನ್ನು ರೈತರು ಸಹಾಯಧನದಡಿ ಪಡೆಯಲು ಮೊದಲು **FRUITS (Farmers Registration and Unified Beneficiary Information System) Portal** ನಲ್ಲಿ ರೈತರ ನೊಂದಣಿಯಾಗಿ ಕೆ ಕಿಸಾನ್‌ನಲ್ಲಿ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಬೇಕು.

ಅ) **FRUITS (Farmers Registration and Unified Beneficiary Information System) Portal** ನಲ್ಲಿ ರೈತರ ನೊಂದಣಿ: ಸಹಾಯಧನದಡಿ ಸವಲತ್ತನ್ನು ಪಡೆಯಲು ಇಚ್ಚಿಸುವ ರೈತರು ಒಂದು ಭಾರಿ ಕಡ್ಡಾಯವಾಗಿ **FRUITS** ನಲ್ಲಿ ನೋಂದಾಯಿಸಿಕೊಳ್ಳಬೇಕು. ಈ ತಂತ್ರಾಂಶದಲ್ಲಿ ನೊಂದಾಯಿಸಲು, ರೈತರು ಈ ಕೆಳಕಂಡ ದಾಖಲಾತಿಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರದಲ್ಲಿ ಸಲ್ಲಿಸಬೇಕಾಗಿರುತ್ತದೆ:

ಆ) ವೈಯುಕ್ತಿಕ ವಿವರ - ಹೆಸರು (ಆಧಾರ್ ಕಾರ್ಡ್ ನಲ್ಲಿರುವಂತೆ, ತಂದೆ/ ಗಂಡನ ಹೆಸರು, ಮೊಬೈಲ್ ಸಂಖ್ಯೆ, ಜಾತಿ ವಿವರಗಳು, ಜಾತಿ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಾಗಿದ್ದಲ್ಲಿ ಮಾತ್ರ), ಇತ್ಯಾದಿ)

ಇ) ವಿಳಾಸ

ಈ) ಗುರುತಿನ ವಿವರಗಳು – Voter ID Card Number/ Ration Card Number.

ಉ) ಭೂಮಿ ವಿವರಗಳು - ಪಹಣಿ / ಹಿಡುವಳಿ ಪತ್ರ

ಊ) ಉಳಿತಾಯ ಖಾತೆ ಹೊಂದಿರುವ ಬ್ಯಾಂಕ್‌ನ ವಿವರಗಳು- ಬ್ಯಾಂಕ್ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಬ್ರಾಂಚ್, IFSC Code & MICR Code.

ಋ) ಆಧಾರ್ ಕಾರ್ಡ‌ನ ಪ್ರತಿ & ಆಧಾರ್ ಒಪ್ಪಿಗೆ ಪತ್ರ (Consent letter)

30. ಕೃಷಿ ಯಂತ್ರೋಪಕರಣಗಳನ್ನು ಸಹಾಯಧನ ಯೋಜನೆಯಡಿ ಖರೀದಿಸಲು ಅರ್ಜಿ ಸಲ್ಲಿಕೆ :

1. **FRUITS** (Farmers Registration and Unified Beneficiary Information System) Portal ತಂತ್ರಾಂಶದಲ್ಲಿ ನೊಂದಾಯಿತರಾದ ರೈತರು ಮಾತ್ರ ತಾವು ಇಚ್ಚಿಸುವ ಯಂತ್ರೋಪರಕರಣಗಳಿಗೆ ಕೆ-ಕಿಸಾನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
2. ರೈತರು ತಾವು ಇಚ್ಚಿಸುವ ಯಂತ್ರೋಪಕರಣಗಳಿಗೆ ಕೆ-ಕಿಸಾನ್ ಪೋರ್ಟಲ್‌ನ Citizen Centric login (kkisan.karnataka.gov.in) ಅಥವಾ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವುದು.
3. ರೈತರು ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು, ರೈತರು ಸಲ್ಲಿಸುವ ಅರ್ಜಿಗಳ ಜೇಷ್ಠತೆ ಆಧಾರದ ಮೇಲೆ ಕೆ-ಕಿಸಾನದ ಪೋರ್ಟ್‌ಲ್‌ನ RSK Login ID ಯಲ್ಲಿ ಅಪ್‌ಲೋಡ್ ಮಾಡುವುದು.

31. ಕೃಷಿ ಯಂತ್ರೋಪಕರಣಗಳನ್ನು ಸಹಾಯಧನ ಯೋಜನೆಯಡಿ ಖರೀದಿಸಲು ಸಲ್ಲಿಕೆಯಾಗಿರುವ ಅರ್ಜಿಗಳ ಪರಿಶೀಲನೆ ಮತ್ತು ಸಹಾಯಧನ ಮಂಜೂರಾತಿ:

1. ಕೆ-ಕಿಸಾನ್ ಪೋರ್ಟಲ್‌ನಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿಗಳು ಪರಿಶೀಲಿಸುವುದು. ಉಪಕರಣ / ಘಟಕದ ಖರೀದಿಗೆ ಬ್ಯಾಂಕ್‌ನಿಂದ ಸಾಲ ಪಡೆದಿದ್ದಲ್ಲಿ, ಬ್ಯಾಂಕ್ ಸಾಲದ ಖಾತೆ ವಿವರಗಳೊಂದಿಗೆ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಿಗೆ ಅರ್ಜಿಯೊಂದಿಗೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸುವುದು.
2. ವಿವಿಧ ಯೋಜನೆಗಳಡಿ ವಿತರಿಸುವ ಉಪಕರಣ / ಸವಲತ್ತಿನ ಬೆಲೆಯು ರೂ.20,000/- ಕ್ಕಿಂತ ಅಧಿಕವಿದ್ದಲ್ಲಿ, ಸವಲತ್ತನ್ನು ಪಡೆಯಲು ಇಚ್ಛಿಸಿರುವ ರೈತರಿಂದ ರೂ.20/-ರ ಛಾಪಾ ಕಾಗದದ ಮೇಲೆ ಸದರಿ ಕೃಷಿ ಯಂತ್ರೋಪಕರಣವನ್ನು ಕೃಷಿ ಕಾರ್ಯಕ್ರಮಕ್ಕಾಗಿ ಮಾತ್ರ ಉಪಯೋಗಿಸುವ ಬಗ್ಗೆ, ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದು ಹಾಗೂ ಪರಬಾರೆ ಮಾಡುವುದಿಲ್ಲವೆಂದು ಘೋಷಣಾ ಪತ್ರವನ್ನು ಪಡೆಯುವುದು.
3. ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲಾತಿಗಳು ತೃಪ್ತಿಕರವಾಗಿದ್ದಲ್ಲಿ, ಸ.ಕೃ.ನಿ ಲಾಗಿನ್ ಐಡಿಗೆ ರವಾನಿಸುವುದು. ಇಲ್ಲದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸುವುದು.
4. ಸ.ಕೃ.ನಿ ಕಛೇರಿ ಅಧಿಕಾರಿಗಳು ತಮ್ಮ ಲಾಗಿನ್ ಐಡಿಗೆ ರವಾನೆಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ, ಜೇಷ್ಠತಾ ಆಧಾರದ ಮೇಲೆ ಅರ್ಹಗೊಂಡ ರೈತರಿಂದ ಸದರಿ ಘಟಕಕ್ಕೆ ಇತರೆ ಇಲಾಖೆಗಳಾದ ತೋಟಗಾರಿಕೆ/ರೇಷ್ಮೆ ಇಲಾಖೆಯಿಂದ ಸಹಾಯಧನ ಪಡೆದಿರುವುದಿಲ್ಲವೆಂಬ ದೃಢೀಕರಣ ಪತ್ರದ ದಾಖಲಾತಿಗಳನ್ನು ಮಂಜೂರಾತಿ ಆದೇಶ ನೀಡುವ ಮುನ್ನ ಪಡೆಯುವುದು.
5. ಕೇಂದ್ರ ಮತ್ತು ರಾಜ್ಯ ವಲಯದ ಯೋಜನೆಗಳಡಿ ನಿಗಧಿಪಡಿಸಿದ ಕಾರ್ಯಕ್ರಮದನ್ವಯ, ಜೇಷ್ಠತೆ ಆಧಾರದ ಮೇರೆಗೆ ರೈತರಿಗೆ ಮಂಜೂರಾತಿ ಆದೇಶ (ಅನುಬಂಧ-ಈ) ನೀಡಿ, ಪಾವತಿಸಬೇಕಾದ ರೈತರ ವಂತಿಕೆಯನ್ನು, ಸಂಬಂಧಪಟ್ಟ ಅನುಮೋದಿತ ದರ ಕರಾರು ಹೊಂದಿರುವ ಸಂಸ್ಥೆಯ (Rate Contract Holder) ಬ್ಯಾಂಕ್ ಖಾತೆಗೆ ಜಮಾ ಮಾಡಲು ತಿಳಿಸುವುದು.
6. ಜೇಷ್ಠತೆಯಲ್ಲಿರುವ ರೈತರಿಗೆ ಮಂಜೂರಾತಿ ಆದೇಶವನ್ನು ನೀಡಿದ 10 ದಿನಗಳೊಳಗೆ ರೈತ ವಂತಿಕೆಯನ್ನು ಪಾವತಿಸದ್ದಿದ್ದಲ್ಲಿ, ಅಂತಹ ರೈತರನ್ನು ಕೆ-ಕಿಸಾನ್ ಪೋರ್ಟಲ್‌ನಲ್ಲಿ pending list ನಲ್ಲಿ ಇಟ್ಟು, ಮುಂದಿನ ಜೇಷ್ಠತೆಯನ್ನು ಪರಿಗಣಿಸುವುದು, pending list ನಲ್ಲಿ ಇಟ್ಟಿರುವ ರೈತರು ತಮ್ಮ ವಂತಿಕೆಯನ್ನು ಪಾವತಿಸಲು ಮುಂದೆ ಬಂದಾಗ, ಸದರಿ ರೈತರನ್ನು ಪರಿಗಣಿಸಿ ಕೂಡಲೇ ರೈತರ ವಂತಿಯನ್ನು ಪಾವತಿಸಲು ಅನುವು ಮಾಡಿಕೊಡುವುದು.
7. ಒಂದು ವೇಳೆ ರೈತರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೆಲವು ಮಾರ್ಪಾಡುಗಳನ್ನು ಕೋರಿದಲ್ಲಿ, ರೈತರ ವಂತಿಕೆ ಪಾವತಿಸಿದ challan entry ಮಾಡುವ ಮುನ್ನ, ಸ.ಕೃ.ನಿ ಲಾಗಿನ್ ಐಡಿಯಲ್ಲಿ ಮಾರ್ಪಾಡುಗಳನ್ನು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ಸಂಬಂಧಿಸಿದ ರೈತರಿಂದ ಒಪ್ಪಿಗೆ ಪತ್ರ ಪಡೆದು (ಅನುಬಂಧ-ಋ), ಸೂಕ್ತ ಕ್ರಮಕೈಗೊಳ್ಳುವುದು.

8. ತಾಲ್ಲೂಕು ಸ.ಕೃ.ನಿ ರವರು ರೈತರು ದರ ಕರಾರು ಹೊಂದಿರುವ ಸಂಸ್ಥೆಯ (Rate Contract Holder) ಖಾತೆಗೆ ಜಮೆ ಮಾಡಿರುವ ರೈತರ ವಂತಿಕೆಗೆ ಪಾವತಿಸಿರುವ ಕುರಿತು UTR / Challan ಸಂಖ್ಯೆಯನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಸ.ಕೃ.ನಿ ರವರು ಸಂಬಂಧಿಸಿದ ದರಕರಾರು ಹೊಂದಿರುವ ಸಂಸ್ಥೆಗೆ, ಸರಬರಾಜು ಆದೇಶವನ್ನು (ಅನುಬಂಧ-ಉ) ನೀಡುವುದು.
9. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು, ಸ.ಕೃ.ನಿ. ಕಛೇರಿರವರು ದರ ಕರಾರು ಹೊಂದಿರುವ ಸಂಸ್ಥೆಗೆ (Rate Contract Holder) ನೀಡಿರುವ ಕಾರ್ಯಾದೇಶದನ್ವಯ ಯಂತ್ರೋಪಕರಣಗಳ ಸರಬರಾಜು ಪಡೆದು, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿ ಭೌತಿಕ ಪರಿಶೀಲನೆಯನ್ನು **ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಅಪ್ ಲೋಡ್** ಮಾಡಿ ವಿತರಿಸುವುದು.
10. ಉಪಕರಣಗಳೊಂದಿಗೆ ಉಪಯೋಗಿಸುವ ವಿಧಾನದ ಕೈಪಿಡಿಯನ್ನು (Users manual) ಹಾಗು ಅಳತೆ / Specification ಗಳನ್ನು ಒದಗಿಸಿರುವ ಬಗ್ಗೆ ಮತ್ತು ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
11. ರೈತರು ದೊಡ್ಡ ಉಪಕರಣಗಳನ್ನು ಪಡೆದಿದ್ದಲ್ಲಿ, ಇಲಾಖೆಯ ಅಧಿಕಾರಿಗಳು ಖುದ್ದಾಗಿ ಸ್ಥಳಕ್ಕೆ / ರೈತರ ತಾಕಿಗೆ ಭೇಟಿ ನೀಡಿ, ಮಹಜರ್ ಮಾಡಿ, ಸದರಿ ಉಪಕರಣಗಳು ಇಲಾಖೆ ನಿಗಧಿಪಡಿಸುವ ತಾಂತ್ರಿಕ ಮಾನದಂಡಗಳಂತೆ ಸರಬರಾಜು ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು- ರೈತ, ಉಪಕರಣ, ಇಲಾಖಾ ಅಧಿಕಾರಿಗಳು ಹಾಗೂ ಉಪಕರಣದ **ಯೂನಿಕ್ ಕೊಡ್ (unique code)** ವಿವರಗಳನ್ನು ಕೆ ಕಿಸಾನ್ ಮೋಬೈಲ್ ಆಪ್ ನಲ್ಲಿ ಅಪ್‌ಲೋಡ್ ಮಾಡುವುದು. ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ನೊಂದಣಿ ಮಾಡಿಸಿದ ದಾಖಲಾತಿ (ಆರ್.ಸಿ ಬುಕ್, ನೊಂದಣಿ ಸಂಖ್ಯೆಯೊಂದಿಗೆ), ರೈತರಿಂದ ಪಡೆದ ತೃಪ್ತಿಕರ ಪ್ರಮಾಣ ಪತ್ರ, ಸ್ಥಳಾ ಪರಿಶೀಲನಾ ವರದಿ, ಡೆಲವರಿ ಚಲನ್ (ಡೆಲಿವರಿ ಚಲನ್, ಚಾಸಿಸ್ ನಂಬರ್, ಎಂಜಿನ್ ನಂಬರ್‌ನ್ನು ಅಗತ್ಯವಿರುವೆಡೆ ನಮೂದಿಸುವುದು) ಹಾಗೂ ಕ್ರೆಡಿಟ್ ಬಿಲ್ಲಿನೊಂದಿಗೆ ವರದಿ ನೀಡುವುದು.
12. ಸರಬರಾಜುದಾರರು ಉಪಕರಣ ಸರಬರಾಜು ಮಾಡುವಾಗ ಪ್ರತಿ ಉಪಕರಣಗಳ ಮೇಲೆ "**2020-21 ಸಾಲಿನಲ್ಲಿ ಕೃಷಿ ಇಲಾಖಾ ಸಹಾಯಧನ ಪಡೆಯಲಾಗಿದೆ**" ಎಂದು ಮುದ್ರಿಸಿರುವುದನ್ನು ಮತ್ತು ಸಂಬಂಧಿಸಿದ ಸಂಸ್ಥೆಗಳ ಹೆಸರು, ಬ್ರಾಂಡ್, ಯೂನಿಕ್ ಕೋಡ್ ಹಾಗೂ Specification ಅಂಶಗಳನ್ನು ಸವಲತ್ತಿನ ಮೇಲೆ ಎಂಬೋಜ್ / ವಿವರಗಳುಳ್ಳ ಪ್ಲೇಟ್‌ಗಳನ್ನು ರಿವೀಟ್ ಮಾಡಿರುವುದನ್ನು ಖಾತರಿ ಪಡಿಸಿಕೊಂಡು ತದನಂತರ ಸರಬರಾಜು ಮಾಡುವುದು. ಈ ಕೆಳಕಂಡ ವಿವರಗಳೊಂದಿಗೆ ಕಡ್ಡಾಯವಾಗಿ ಸಂಸ್ಥೆಯವರು ಮುದ್ರಿಸುವಂತೆ ನೋಡಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ಪರಿಶೀಲಿಸಿದ ಅಧಿಕಾರಿಗಳೇ ಜವಾಬ್ದಾರಿಯಾಗಿರುತ್ತಾರೆ.

ಉಪಕರಣದ ಮಾದರಿ ಮೇಲೆ ರಿವೀಟ್ ಅಥವಾ ಎಂಬೋಸ್ ಮಾಡುವ ಮಾಹಿತಿ.

- ಸಂಬಂಧಿಸಿದ ಸಂಸ್ಥೆಯ ಹೆಸರು,
- ಯೂನಿಕ್ ಕೋಡ್ – EX : Year of Supply /Name of the Firm (in Short)/ Item Name / District / Sl.No.of the Equipment.
- ಬ್ರಾಂಡ್, ತೂಕ ಹಾಗು ಇತರೆ ಅಂಶಗಳುಳ್ಳ ಮಾಹಿತಿ

13. ಇಂಜಿನ್/ಮೋಟಾರ್ ಚಾಲಿತ ಕೃಷಿ ಯಂತ್ರೋಪಕರಣ/ಕೃಷಿ ಸಂಸ್ಕರಣಾ ಘಟಕಗಳನ್ನು ಇಂಜಿನ್/ಮೋಟಾರ್‌ನ್ನು ಮತ್ತು ಘಟಕಗಳನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವ ಸಂದರ್ಭಗಳಲ್ಲಿ, ಇಂಜಿನ್/ಮೋಟಾರ್ ಮೇಲೆ ಕಡ್ಡಾಯವಾಗಿ **ISI** ಗುರುತು ಹೊಂದಿರಬೇಕು.
14. ಸ.ಕೃ.ನಿ ಕಛೇರಿ ಅಧಿಕಾರಿಗಳು ಮೇಲೆ ತಿಳಿಸಿರುವ ನಿಯಮಗಳನ್ವಯ ಯಂತ್ರೋಪಕರಣಗಳು ವಿತರಣೆಯಾಗಿದ್ದರೆ, ನಿಯಮಾನುಸಾರ ಸರ್ಕಾರದ ಸಹಾಯಧನವನ್ನು ಸರ್ಕಾರದ ಆದೇಶ ಸಂಖ್ಯೆ: ಕೃಇ 100 ಕೃಮಸ 2018, ದಿನಾಂಕ: 04–10–2018 ರನ್ವಯ ಪಾವತಿಸುವುದು.
15. ಸಹಾಯಧನವನ್ನು ರೈತರು ಉಪಕರಣದ ಪೂರ್ಣ ಮೌಲ್ಯವನ್ನು ಪಾವತಿಸಿದ್ದಲ್ಲಿ, ರೈತರ ಬ್ಯಾಂಕ್ ಖಾತೆಗೆ, ರೈತರು ಘಟಕದ ಖರೀದಿಗೆ ಬ್ಯಾಂಕ್‌ನಿಂದ ಸಾಲ ಪಡೆದು ಉಪಕರಣದ ಪೂರ್ಣ ಮೌಲ್ಯವನ್ನು ದರ ಕರಾರು ಹೊಂದಿರುವ ಸಂಸ್ಥೆಗೆ ಪಾವತಿಸಿದ್ದಲ್ಲಿ, ರೈತರ ಸಾಲದ ಖಾತೆಗೆ, ರೈತರು ತಮ್ಮ ವಂತಿಕೆಯನ್ನು ಮಾತ್ರ ಪಾವತಿಸಿದ್ದಲ್ಲಿ, ರೈತರು ನೀಡಿರುವ Authorisation letter (ಅನುಬಂಧ ಇ) ಆಧಾರದ ಮೇಲೆ ಸಂಬಂಧಪಟ್ಟ ದರ ಕರಾರು ಹೊಂದಿರುವ ಸಂಸ್ಥೆಗಳ (Rate Contract Holder's Account) ಬ್ಯಾಂಕ್ ಖಾತೆಗೆ ಜಮಾ ಮಾಡಲು ಕ್ರಮ ವಹಿಸುವುದು.
16. ಒಂದು ವೇಳೆ SCP / TSP ಯೋಜನೆಗಳಡಿ, ಅನುದಾನ ಕೊರತೆಯಿಂದ, SC / ST ವರ್ಗದ ರೈತರು ಸಾಮಾನ್ಯ ಯೋಜನೆಯಡಿ ಸವಲತ್ತು ಪಡೆಯಲು ಇಚ್ಛಿಸಿದ್ದಲ್ಲಿ, ಸ.ಕೃ.ನಿ ಲಾಗಿನ್ ಐಡಿಯಲ್ಲಿ ಇಂತಹ ರೈತರ ಅರ್ಜಿಯನ್ನು ಸಾಮಾನ್ಯ ಯೋಜನೆಯಡಿ ಪರಿಗಣಿಸಲು ಸೂಕ್ತ ಮಾರ್ಪಾಡುಗಳನ್ನು ಮಾಡಬಹುದಾಗಿರುತ್ತದೆ. ಅದರಂತೆ, ಸಂಬಂಧಿಸಿದ ರೈತರಿಂದ **ಅನುಬಂಧ-ಊ** ರಲ್ಲಿರುವಂತೆ ಒಪ್ಪಿಗೆ ಪತ್ರ ಪಡೆದು, ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ಸಾಮಾನ್ಯ ವರ್ಗದವರಿಗೆ ನಿಗಧಿಪಡಿಸಿದ ಶೇ.50 ರಷ್ಟು ಸಹಾಯಧನ ಮಾತ್ರ ಪಾವತಿ ಮಾಡುವುದು.
17. ಸ.ಕೃ.ನಿ. ಕಛೇರಿಯಲ್ಲಿನ ದಾಸ್ತಾನು ವಹಿಯಲ್ಲಿ ಬಿಲ್ಲಿನ ವಿವರಗಳನ್ನು ನಮೂದಿಸಿ ರೈತರ ಸಹಿಯನ್ನು ಪಡೆಯುವುದು.
18. ಸಹಾಯಕ ಕೃಷಿ ನಿರ್ದೇಶಕರು, ದರ ಕರಾರು ಹೊಂದಿರುವ ಸಂಸ್ಥೆಯು ನೀಡಿರುವ ಕ್ರೆಡಿಟ್ ಬಿಲ್ ಆಧಾರದ ಮೇಲೆ ಡಿ.ಸಿ. ಬಿಲ್ಲನ್ನು ತಯಾರಿಸಿ ಮೇಲು ರುಜುವಿಗೆ ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು. ಉಪ ಕೃಷಿ ನಿರ್ದೇಶಕರಿಂದ ಅನುಮೋದನೆಗೊಂಡ ಡಿ.ಸಿ.ಬಿಲ್ಲುಗಳನ್ನು ತಾಲ್ಲೂಕು ಹುಜೂರು ಖಜಾನೆಗೆ ಸಲ್ಲಿಸಿ ಸಹಾಯಧನವನ್ನು ಸಂದರ್ಭೋಚಿತವಾಗಿ ಸಂಬಂಧಿಸಿದವರ ಖಾತೆಗೆ ವರ್ಗಾಯಿಸಲು ಕ್ರಮವಹಿಸುವುದು.

32. ವಿವಿಧ ಲೆಕ್ಕ ಶೀರ್ಷಿಕೆಗಳಡಿ ಸಹಾಯಧನವನ್ನು ಸಮನ್ವಯಗೊಳಿಸಿ ನೀಡುವ ಸನ್ನಿವೇಶಗಳಲ್ಲಿ **ಸಹಾಯಧನದ ಬಿಲ್ಲುಗಳನ್ನು ನೀಡುವ ವಿಧಾನ/ಮಾರ್ಗಸೂಚಿ.**

ಕೇಂದ್ರ (SMAM/ರಾಷ್ಟ್ರೀಯ ಅಹಾರ ಭದ್ರತಾ ಯೋಜನೆ) ಮತ್ತು ರಾಜ್ಯದ ಅನುದಾನವನ್ನು ಪೂರಕವಾಗಿ ಸಮನ್ವಯಗೊಳಿಸಿ ಕೊಡುವ ಸಂದರ್ಭದಲ್ಲಿ ಈ ಕೆಳಕಂಡಂತೆ ಬಿಲ್ಲುಗಳನ್ನು ಪಡೆದು ಸಹಾಯ ಧನವನ್ನು ನೀಡುವುದು.

- ಕೇಂದ್ರ ಮತ್ತು ರಾಜ್ಯದ ಅನುದಾನವನ್ನು ಸಮನ್ವಯಗೊಳಿಸಿ ನೀಡುವ ಸಂದರ್ಭದಲ್ಲಿ ಸಹಾಯಧನದ ಮೂಲ ಸಹಿಯುಳ್ಳ ಒಂದೇ ಬಿಲ್ಲಿನ 6 ಪ್ರತಿಗಳನ್ನು ನೀಡಬೇಕು.
- ಬಿಲ್ಲಿನ ಮೇಲೆ ಒಟ್ಟು ಸಹಾಯಧನವನ್ನು ನಮೂದಿಸಿ ಅದರ ಕೆಳಗೆ ಕೇಂದ್ರದ ಸಹಾಯಧನ ಹಾಗೂ ರಾಜ್ಯದ ಸಹಾಯಧನವನ್ನು ಪ್ರತ್ಯೇಕಿಸಬೇಕು. ಕೇಂದ್ರದ ಹಾಗೂ ರಾಜ್ಯದ ಸಹಾಯಧನಕ್ಕೆ ಗುರುತು ಹಾಕಿದ ತಲಾ ಮೂರು ಪ್ರತಿಗಳನ್ನು ನೀಡುವುದು.
- ಸಂದರ್ಭೋಚಿತವಾಗಿ ಕೇಂದ್ರದ ಸಹಾಯಧನಕ್ಕೆ ಗುರುತು ಮಾಡಿದ ಮೂರು ಬಿಲ್ಲುಗಳನ್ನು ಕೇಂದ್ರದ ಅನುದಾನಕ್ಕೆ ಡಿ.ಸಿ.ಬಿಲ್ಲನ್ನು ಮತ್ತು ರಾಜ್ಯದ ಸಹಾಯಧನಕ್ಕೆ ಗುರುತು ಮಾಡಿದ ಮೂರು ಬಿಲ್ಲುಗಳನ್ನು ರಾಜ್ಯದ ಅನುದಾನಕ್ಕೆ ಡಿ.ಸಿ.ಬಿಲ್ಲನ್ನು (ಸಂದರ್ಭೋಚಿತವಾಗಿ) ತಯಾರಿಸಲು ಉಪಯೋಗಿಸಿಕೊಳ್ಳುವುದು.
- ಕೇಂದ್ರದ ಹಾಗೂ ರಾಜ್ಯದ ಸಹಾಯಧನವನ್ನು ನೀಡಲು ತಯಾರಿಸುವ ಡಿ.ಸಿ.ಬಿಲ್ಲುಗಳನ್ನು ಅನುಕ್ರಮವಾಗಿ ಮೂಲ ಸಂಖ್ಯೆ ಹಾಗೂ ಅದೇ ಸಂಖ್ಯೆಯ (A) ಮತ್ತು (B) ಎಂದು ಗುರುತು ಮಾಡುವುದು. ಉದಾಃ ಕೇಂದ್ರದ ಸಹಾಯಧನಕ್ಕೆ ತಯಾರಿಸಿದ ಡಿ.ಸಿ. ಬಿಲ್ಲು ಸಂ.120(A) ಆದಲ್ಲಿ ಅದೇ ಉಪಕರಣದ ರಾಜ್ಯದ ಅನುದಾನಕ್ಕೆ ತಯಾರಿಸುವ ಡಿ.ಸಿ.ಬಿಲ್ಲಿಗೆ 120(B) ಎಂದು ನೀಡುವುದು.
- ಆರ್ಥಿಕ ವರ್ಷದ ಅಂತ್ಯದಲ್ಲಿ ಒಂದು ಲೆಕ್ಕಶೀರ್ಷಿಕೆಯಡಿ ಬಿಲ್ಲು ಪಾವತಿಯಾಗಿದ್ದು, ಇನ್ನೊಂದು ಲೆಕ್ಕಶೀರ್ಷಿಕೆಯಡಿ ಬಿಲ್ಲು ಪಾವತಿಯಾಗದೆ ಇರುವ ಸಮಯದಲ್ಲಿ ಅಂತಹ ಬಿಲ್ಲುಗಳ ಬಗ್ಗೆ ಕೇಂದ್ರ ಕಛೇರಿಗೆ ವರದಿ ಸಲ್ಲಿಸಿ ಅನುಮತಿ ಪಡೆದು ಮುಂದಿನ ಆರ್ಥಿಕ ವರ್ಷದಲ್ಲಿ ಬಾಕಿ ಇರುವ ಬಿಲ್ಲುಗಳ (ಎ ಬಿಲ್ಲು ಮತ್ತು ಬಿ- ಬಿಲ್ಲು) ಸಹಾಯಧನ ಪಾವತಿಸಿದ ನಂತರವೇ ಪ್ರಸ್ತುತ ಸಾಲಿನ ಅರ್ಜಿಗಳ ಸಹಾಯಧನವನ್ನು ಪಾವತಿಸಲು ಕ್ರಮಕ್ಕೈಗೊಳ್ಳುವುದು.

ಆ) ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಉಳಿದಿರುವ ಮೊತ್ತ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ:

ಸದರಿ ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ಕೇಂದ್ರ ಪುರಸ್ಕೃತ SMAM ಯಾಂತ್ರೀಕರಣ / NFSM ಯೋಜನೆಯಡಿ ಅನುಷ್ಠಾನ ಮಾಡಿದ SCP ಮತ್ತು TSP ಯೋಜನೆಗಳಿಗೆ ಪೂರಕ ಅನುದಾನವನ್ನಾಗಿ ಮಾತ್ರ ಬಳಸುವುದು. ಯಾವುದೇ ಕಾರಣಕ್ಕೂ ಒಂದೇ ಬಿಲ್ಲಿನಲ್ಲಿ ವೆಚ್ಚ ಭರಿಸಲು ಅವಕಾಶ ಇರುವುದಿಲ್ಲ.

ಇ) ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ:

ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯ ಪ್ರಮುಖ ಉದ್ದೇಶವು ಗ್ರಾಮೀಣ ಪ್ರದೇಶಗಳಲ್ಲಿ ರೈತರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಉತ್ತಮ ಸಂಸ್ಕರಣೆಗೆ ಒಳಪಡಿಸಿ ಗುಣಮಟ್ಟದ ಉತ್ಪನ್ನಗಳನ್ನು ರೈತರಿಗೆ ಹಾಗೂ ಬಳಕೆದಾರರಿಗೆ ಒದಗಿಸುವುದಾಗಿದೆ. ಉತ್ತಮ ಗುಣಮಟ್ಟದ ಹಾಗೂ ಸಂಸ್ಕರಿಸಿದ ಉತ್ಪನ್ನಗಳು ರೈತರಿಗೆ ಹೆಚ್ಚಿನ ಬೆಲೆಯನ್ನೂ ಸಹ ಒದಗಿಸಿಕೊಡುವುದರಿಂದ ಅವರ ಆರ್ಥಿಕ ಸಂಕಷ್ಟಗಳು ಕಡಿಮೆಯಾಗುತ್ತದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳು ಹಾಗೂ ಟಾರ್ಪಲೀನ್ ವಿತರಣೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಕೃಷಿ ಉತ್ಪನ್ನಗಳ ಸಂಸ್ಕರಣಾ ಕಾರ್ಯಕ್ರಮವನ್ನು ರಾಜ್ಯ ವಲಯ ಲೆಕ್ಕ ಶೀರ್ಷಿಕೆ: 2401–00–103–0–15 , ಕೇಂದ್ರ ಪುರಕೃತ ಯೋಜನೆಗಳಾದ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಲೆಕ್ಕ ಶೀರ್ಷಿಕೆ: 2401–00–113–0–02, ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯ ಎನ್.ಎಮ್.ಇ.ಓ (NFSM) ಲೆಕ್ಕ ಶೀರ್ಷಿಕೆ:2401–00–102–0–08 ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಲೆಕ್ಕ ಶೀರ್ಷಿಕೆ: 2401–00–800–1–57 ಯೋಜನೆಗಳಡಿ ಒದಗಿಸುವ ಅನುದಾನವನ್ನು ಉಪಯೋಗಿಸಿಕೊಂಡು ಅನುಷ್ಠಾನಗೊಳಿಸುವುದು.

2020–21 ನೇ ಸಾಲಿನ ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯ ಮಾರ್ಗಸೂಚಿಗಳು :

1. ರಾಜ್ಯವಲಯ ಲೆಕ್ಕಶೀರ್ಷಿಕೆ2401–00–103–0–15 ಅಡಿ ಒದಗಿಸಿದ ಅನುದಾನದಲ್ಲಿ ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಮತ್ತು ಟಾರ್ಪಲಿನ್ ವಿತರಣೆಗೆ ನೀಡಲಾಗುವ ಕ್ರಿಯಾ ಯೋಜನೆಯಂತೆ ಅನುಷ್ಠಾನಗೊಳಿಸುವುದು.

2. 2019-20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದ ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ವಿತರಣಾ ಯೋಜನೆಯಡಿ ವಿತರಿಸಲಾಗುತ್ತಿದ್ದ ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳನ್ನು ಪ್ರಸಕ್ತ ಸಾಲಿನಲ್ಲಿ ಕೃಷಿ ಸಂಸ್ಕರಣೆ ಯೋಜನೆಯಡಿ ವಿತರಿಸಲಾಗುವ ಸಂಸ್ಕರಣಾ ಘಟಕಗಳೊಡನೆ ಸೇರ್ಪಡೆಗೊಳಿಸಲಾಗಿರುತ್ತದೆ. ಕೃಷಿ ಸಂಸ್ಕರಣಾ ಘಟಕಗಳಿಗೆ, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳಿಗೆ & ಟಾರ್ಪಲೀನ್ ಗಳ ವಿತರಣೆಯನ್ನು ಕ್ರಿಯಾ ಯೋಜನೆ ಅನ್ವಯ ಅನುಷ್ಠಾನಗೊಳಿಸುವುದು.
3. **ದಿ:01-04-2020** ರ ನಂತರ ಖರೀದಿಸಿದ ಘಟಕಗಳಿಗೆ ಮಾತ್ರ ಪ್ರಸಕ್ತ ಸಾಲಿನಲ್ಲಿ ಸಹಾಯಧನವನ್ನು ನೀಡುವುದು ಮತ್ತು 2019-20ನೇ ಸಾಲಿನಲ್ಲಿ ಕ್ರಮಬದ್ಧವಾಗಿ ಬಾಕಿ ಇರುವ ಘಟಕಗಳಿಗೆ ಮಾತ್ರ ನಿಯಮಾನುಸಾರ ಪ್ರಸಕ್ತ ಸಾಲಿನಲ್ಲಿ ಸಹಾಯಧನ ನೀಡುವುದು.
4. 2020-21ನೇ ಸಾಲಿಗೆ ನೀಡುವ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನಿಗಧಿಪಡಿಸಿರುವ ಅನುದಾನದಂತೆ ನಿಯಮಾನುಸಾರ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಮಹಿಳಾ (ಶೇ.33ರಷ್ಟು) ಮತ್ತು ಅಲ್ಪಸಂಖ್ಯಾತರ (ಶೇ.15ರಷ್ಟು) ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಆದ್ಯತೆ ಮೇರೆಗೆ ಪರಿಗಣಿಸುವುದು.
5. ಸರ್ಕಾರದ ಆದೇಶ ಸಂ:ಕೃಇ 63 ಕೃಮಸ 2015 ದಿ: 16.05.2015 ಹಾಗೂ ತಿದ್ದುಪಡಿ ಆದೇಶ ದಿನಾಂಕ:05.09.2015 ರ ಅನ್ವಯ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನವನ್ನು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ರೂ.ಒಂದು ಲಕ್ಷದವರೆಗೆ ನೀಡಲಾಗುವುದು. ಮುಂದುವರೆದು ರೂ.5.00 ಲಕ್ಷದವರೆಗೆ ಇರುವ ಕೃಷಿ ಯಂತ್ರೋಪಕರಣಗಳನ್ನು ಕಾನೂನಿನ್ವಯ ನೊಂದಾಯಿತ ರೈತ ಗುಂಪುಗಳಿಗೆ (Farmers Producer Organizations, Self Help Groups and Farmer Clubs, Raitha Shakthi groups/Registered Farmer Organizations) ಹಾಗೂ ಎಲ್ಲಾ ತರಹದ ಕೃಷಿ ಸಂಸ್ಕರಣಾ ಉಪಕರಣಗಳನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಒದಗಿಸುವುದು.

**I. ಕೃಷಿ ಸಂಸ್ಕರಣಾ ಘಟಕಗಳ ವಿತರಣೆ: (106, 422 & 423)**

- ಕೃಷಿ ಸಂಸ್ಕರಣಾ ಘಟಕಗಳನ್ನು ಜಿಲ್ಲೆಯಲ್ಲಿ ಸಂಸ್ಕರಣೆಗೆ ಒಳಪಡುವ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ, ರೈತರಿಗೆ, ಮಹಿಳಾ ಸ್ವಸಹಾಯ ಗುಂಪುಗಳಿಗೆ/ ರೈತ ಗುಂಪುಗಳಿಗೆ/ ಸರ್ಕಾರೇತರ ಸಂಸ್ಥೆಗಳಿಗೆ ಸಾಮಾನ್ಯ ಯೋಜನೆಯಡಿ ಶೇ.50 ಕ್ಕೆ ಮೀರದಂತೆ ಸಹಾಯಧನವನ್ನು ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕಗಳಾದ ದಾಲ್ ಪ್ರೊಸೆಸರ್, ಫ್ಲೋರ್ ಮಿಲ್, ಮಿನಿ ರೈಸ್ ಮಿಲ್, ಮಿನಿ ಆಯಿಲ್‌ಎಕ್ಸಪೆಲ್ಲರ್, ರಾಗಿಕ್ಲೀನಿಂಗ್ ಮೆಷಿನ್, ಶುಗರ್‌ಕೇನ್ ಕ್ರಶೀಂಗ್ ಯೂನಿಟ್, ಪಲ್ವರೈಸರ್‌ಗಳು, ರವಾ/ಕ್ಯಾಟಲ್ ಫೀಡ್ ಮೆಷಿನ್, ಚಿಲ್ಲಿ ಪೌಡಿಂಗ್ ಮೆಷಿನ್, ಶಾವಿಗೆ ಮೆಷಿನ್, ಶುಗರ್‌ಕೇನ್‌ಜ್ಯೂಸ್ ಮೇಕಿಂಗ್ ಮೆಷಿನ್, ವೀಟ್ ಪಾಲಿಷರ್ ಹಾಗೂ ಇನ್ನಿತರೆ ಘಟಕಗಳನ್ನು ಕೇಂದ್ರ

ಕಛೇರಿಯ ಕೃಷಿ ಯಂತ್ರೋಪಕರಣಗಳ ದರಕರಾರಿನಲ್ಲಿ ಹೊರಡಿಸಿರುವ ದರಪಟ್ಟಿಯನ್ನೊಳಗೊಂಡ ಸುತ್ತೋಲೆಯನ್ವಯ ನೀಡುವುದು.ವಿಶೇಷ ಘಟಕ ಯೋಜನೆ, ಉಪ ಲೆಕ್ಕ ಶೀರ್ಷಿಕೆ (422) ಹಾಗೂ ಗಿರಿಜನ ಉಪಯೋಜನೆಯಡಿ ಉಪ ಲೆಕ್ಕ ಶೀರ್ಷಿಕೆ (423) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರುಗಳಿಗೆ ಶೇ.90 ಅಥವಾ ಗರಿಷ್ಠ ರೂ.1,00,000/- ಸಹಾಯಧನದಲ್ಲಿ ಕೃಷಿ ಸಂಸ್ಕರಣಾ ಘಟಕಗಳನ್ನು ವಿತರಿಸುವುದು.

1. ಕೇಂದ್ರ ಸರ್ಕಾರದ FMTTI ಅಥವಾ ಕೇಂದ್ರ ಸರ್ಕಾರದಿಂದ ಅನುಮೋದಿತ ಸಂಸ್ಥೆಗಳಿಂದ ಪರೀಕ್ಷೆಗೆ ಒಳಪಡಿಸಿದ ಉಪಕರಣಗಳಿಗೆ (ಪರೀಕ್ಷಾ ವರದಿಯನ್ನು ಪಡೆಯುವುದು) ಮಾತ್ರ SMAM ಯೋಜನೆಯಡಿ ಅನುಮೋದನೆಗೊಂಡ ಕೃಷಿ ಸಂಸ್ಕರಣಾ ಘಟಕಗಳಿಗೆ ಪ.ಜಾ, ಪ.ಪಂ, ಸಣ್ಣ, ಅತಿ ಸಣ್ಣ ಮತ್ತು ಮಹಿಳ ವರ್ಗದ ರೈತರಿಗೆ ಶೇ 60 ರಷ್ಟು / ನಿಗದಿಪಡಿಸಿದ ಗರಿಷ್ಠ ಸಹಾಯಧನ ಮಿತಿಗೊಳಪಟ್ಟು ಸಹಾಯಧನ ಮತ್ತು ಇತರೆ ವರ್ಗದ ರೈತರಿಗೆ ಶೇ. 50ರಷ್ಟು/ನಿಗದಿಪಡಿಸಿದ ಗರಿಷ್ಠ ಸಹಾಯಧನ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸುವುದು.
2. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ಅನುಮೋದನೆಗೊಂಡ ಕೃಷಿ ಸಂಸ್ಕರಣಾ ಘಟಕಗಳಿಗೆ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಮಾರ್ಗಸೂಚಿಯನ್ವಯ ಸಹಾಯಧನವನ್ನು ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿಲೆಕ್ಕ ಶೀರ್ಷಿಕೆ:2401–00–113–0–02 ಭರಿಸಿ, ಉಳಿದ ಸಹಾಯಧನ ಮೊತ್ತವನ್ನು ರಾಜ್ಯವಲಯ ಲೆಕ್ಕಶೀರ್ಷಿಕೆ : 2401–00–103–0–15 ಅಡಿ ಭರಿಸುವುದು.
3. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ಕಾರ್ಯಕ್ರಮ ಹಾಗೂ ಅನುದಾನ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಕೃಷಿ ಸಂಸ್ಕರಣಾ ಘಟಕಗಳಿಗೆ ರಾಜ್ಯವಲಯದ ಲೆಕ್ಕಶೀರ್ಷಿಕೆ 2401–00–103–0–15 ಅಡಿ ಒಂದೇ ಬಿಲ್ಲಿನಲ್ಲಿ ಸಹಾಯಧನ ಭರಿಸಬಹುದಾಗಿದೆ.
4. ಇನ್ನುಳಿದಂತೆ ಕೃಷಿ ಯಾಂತ್ರೀಕರಣದ ಮಾರ್ಗಸೂಚಿಯಂತೆ ಕ್ರಮವಹಿಸಿ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿ ಭೌತಿಕ ಪರಿಶೀಲನೆಯನ್ನು ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಅಪ್ ಲೋಡ್ ಮಾಡಿ ವಿತರಿಸುವುದು.

II. ಟಾರ್ಪಲೀನ್ ಗಳ ವಿತರಣೆ: (106, 422 & 423)

1. ಕಟಾವಿನ ನಂತರ ಕೃಷಿ ಉತ್ಪನ್ನಗಳನ್ನು ಮಳೆ, ಗಾಳಿ ಹಾಗೂ ಇತರೆ ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಿ ಆಹಾರ ಧಾನ್ಯಗಳ ಮತ್ತು ಕೃಷಿ ಉತ್ಪನ್ನಗಳ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು, 05 ಪದರಗಳುಳ್ಳ 250 GSM, ಕಪ್ಪು ಬಣ್ಣದ HDPE tarpaulins confirming IS7903/2017 (Type-II)8X6 mtr. ಅಳತೆಯ ಟಾರ್ಪಲೀನ್ ಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50 ಸಹಾಯಧನದಲ್ಲಿ ವಿತರಿಸುವುದು. ವಿಶೇಷ ಘಟಕ ಯೋಜನೆ ಉಪ ಲೆಕ್ಕ ಶೀರ್ಷಿಕೆ (422)

ಹಾಗೂ ಗಿರಿಜನ ಉಪ ಯೋಜನೆಯಡಿ ಉಪ ಲೆಕ್ಕ ಶೀರ್ಷಿಕೆ (423) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರುಗಳಿಗೆ ಶೇ.90ರ ರಿಯಾಯಿತಿ ದರದಲ್ಲಿ ಟಾರ್ಪಲೀನ್‌ಅನ್ನು ವಿತರಿಸುವುದು.

2. ರಾಜ್ಯ ವಲಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಕಾರ್ಯಕ್ರಮದ ಸಾಮಾನ್ಯ ಯೋಜನೆ [2401–00–103–0–15(106)]ಅಡಿ ಟಾರ್ಪಲೀನ್ ವಿತರಣೆಗೆ ಶೇ.50ರ ರಿಯಾಯಿತಿಯನ್ನು ನೀಡುವುದು ಹಾಗೂ ವಿಶೇಷ ಘಟಕ ಯೋಜನೆ ಲೆ.ಶೀ.2401–00–103–0–15 (422) ಮತ್ತು ಗಿರಿ ಜನ ಉಪಯೋಜನೆ ಲೆ.ಶೀ. 2401–00–103–0–15 (423) ಯಡಿ ಟಾರ್ಪಲೀನ್ ವಿತರಣೆಗೆ ಶೇ.90 ರಷ್ಟು ಸಹಾಯಧನವನ್ನು ಒಂದೇ ಬಿಲ್ಲಿನಲ್ಲಿ ಭರಿಸುವುದು.

3. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಅಡಿ ಟಾರ್ಪಲಿನ್‌ಗೆ ಕಾರ್ಯಕ್ರಮ ನೀಡಿದಲ್ಲಿ, ಸದರಿ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನವನ್ನು ಭರಿಸಲು ಅವಕಾಶವಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಒದಗಿಸುವ ಹೆಚ್ಚುವರಿ ಸಹಾಯಧನವನ್ನು ಮಾತ್ರ ರಾಜ್ಯವಲಯ ಲೆಕ್ಕಶೀರ್ಷಿಕೆ:2401–00–103–0–15 (422&423) ಅಡಿ ಒದಗಿಸಿದ್ದ ಅನುದಾನದಲ್ಲಿ ವೆಚ್ಚ ಭರಿಸುವುದು.

4. RKVY ಅಡಿ ವಿತರಣೆ ಮಾಡಿದ ಟಾರ್ಪಲಿನ್‌ಗೆ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿಗಳು **ಕೆ-ಕಿಸಾನ್ ಮೊಬೈಲ್ ಆಪ್** ನಲ್ಲಿ ಅಪ್ ಲೋಡ್ ಮಾಡುವುದರೊಂದಿಗೆ ಜಿಯೋ ಟ್ಯಾಗಿಂಗ್ ಸಹ ಮಾಡುವುದು ಕಡ್ಡಾಯವಾಗಿರುತ್ತದೆ.

5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) [2401–00–800–1–57 (422&423)] ಅಡಿ ಅನುದಾನ ಲಭ್ಯವಿಲ್ಲದಿದ್ದಲ್ಲಿ ರಾಜ್ಯ ವಲಯದ ಸಹಾಯಧನದಡಿ ಒಂದೇ ಬಿಲ್ಲಿನಲ್ಲಿ ವೆಚ್ಚ ಭರಿಸುವುದು.

6. ಅನುಮೋದಿತ ಸಂಸ್ಥೆಗಳು ತಯಾರಕ ಸಂಸ್ಥೆಯ ಹೆಸರು, ಬ್ಯಾಚ್ ಸಂಖ್ಯೆ ಮತ್ತು BIS ಪರವಾಗಿಗೆಯ CM/L ಸಂಖ್ಯೆಯನ್ನು ಹೊಂದಿರುವ 1x1 ಮೀ. ಟಾರ್ಪಲೀನ್ ಮಾದರಿಗಳನ್ನು ಎಲ್ಲಾ ಜಿಲ್ಲಾ ಜಕೃನಿ, ವಿಭಾಗದ ಉಕೃನಿ, ತಾಲ್ಲೂಕ ಸಕೃನಿ ಮತ್ತು ರೈ.ಸಂ.ಕೇಂದ್ರಗಳಿಗೆ ಕಡ್ಡಾಯವಾಗಿ ಸಲ್ಲಿಸುವುದು.

7. ರೈತರಿಗೆ ವಿತರಿಸಲು ರೈ.ಸಂ.ಕೇ.ಗಳಿಗೆ ಸರಬರಾಜು ಮಾಡುವ ಟಾರ್ಪಲೀನ್ ಗಳ ಮೇಲೆ ಕಡ್ಡಾಯಾವಾಗಿ **"Provided by Government of Karnataka, and Agriculture Department"** / "ಕರ್ನಾಟಕ ಸರ್ಕಾರ, ಕೃಷಿ ಇಲಾಖೆಯಿಂದ ಒದಗಿಸಲಾಗಿದೆ" ಎಂಬುವುದರ ಜೊತೆಗೆ ತಯಾರಕ ಸಂಸ್ಥೆಯ ಹೆಸರು, ಬ್ಯಾಚ್ ಸಂಖ್ಯೆ ಮತ್ತು BIS ಪರವಾಗಿಗೆಯ CM/L ಸಂಖ್ಯೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಟಾರ್ಪಲೀನ್ ಎರಡು ಮುಖದಲ್ಲಿ ವಿರುದ್ಧ ದಿಕ್ಕಿನ ಕರ್ಣಗಳಲ್ಲಿ ಬಂದಿರುವ ಲೇಜರ್ ಪ್ರಿಂಟ್ ಅಥವಾ ಅಳಿಸಲಾರದ ಷಾಹಿಯಲ್ಲಿ ಮುದ್ರಿಸಿರುವುದನ್ನು ಕಡ್ಡಾಯವಾಗಿ ಪರಿಶೀಲಿಸಿ ನಂತರ ರೈತರಿಗೆ ವಿತರಿಸುವುದು.

8. ಸರಬರಾಜಾದ ಟಾರ್ಪಲೀನ್‌ಗಳಿಗೆ ಸರಬರಾಜು ಮಾಡಿದ ನಂತರ 06 ತಿಂಗಳವರೆಗೆ ವಾರಂಟಿಯನ್ನು ನೀಡುವುದು.

9. ಮೂರು ವರ್ಷಗಳಿಗೆ ಒಮ್ಮೆ ಮಾತ್ರ ಒರ್ವ ರೈತರಿಗೆ ಒಂದು ಟಾರ್ಪಲೀನ್ ಅನ್ನು ಸಹಾಯಧನದಡಿ ವಿತರಿಸುವುದು.

10. ಟಾರ್ಪಲೀನ್ ಗಳನ್ನು ಸರಬರಾಜುಮಾಡುವ ಸಂಸ್ಥೆಗಳ BIS ಪರವಾನಿಗೆ ಅವಧಿಯನ್ನು ಪರಿಶೀಲಿಸಿದ ನಂತರವೇ ಟಾರ್ಪಲೀನ್ ಗಳನ್ನು ಪಡೆದು ವಿತರಿಸುವುದು. BIS ಅವಧಿ ಮುಗಿದ ಸಂಸ್ಥೆಗಳ ಟಾರ್ಪಲೀನ್ ಗಳನ್ನು ನವೀಕೃತ ವರದಿ ಬಂದ ನಂತರವಷ್ಟೇ ವಿತರಿಸಲು ಕ್ರಮ ವಹಿಸುವುದು.

11. ಅರ್ಹಗೊಂಡ ಸಂಸ್ಥೆಗಳು 2017-18, 2018-19ಮತ್ತು 2019-20ನೇ ಸಾಲಿನಲ್ಲಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಂದ ಸರಬರಾಜು ಆದೇಶ (Indent) ಪಡೆದು ಸರಬರಾಜು ಮಾಡದೇ ಇದ್ದಲ್ಲಿ ಅಂತಹ ಸಂಸ್ಥೆಗಳನ್ನು ಅನುಮೋದಿತ ಪಟ್ಟಿಯಿಂದ ತೆಗೆದು ಹಾಕಲಾಗುವುದು. ಆದ್ದರಿಂದ, ಸಂಬಂಧಿಸಿದ ಸಂಸ್ಥೆಗಳು ಸರಬರಾಜು ಮಾಡದಿದ್ದಲ್ಲಿ ಎಲ್ಲಾ ದಾಖಲಾತಿಗಳೊಂದಿಗೆ ವರದಿ ಮತ್ತು ಪ್ರಸ್ತಾವನೆಯನ್ನು ಕೇಂದ್ರ ಕಚೇರಿಗೆ ತಪ್ಪದೇ ಸಲ್ಲಿಸುವುದು.

12. ಅರ್ಹಗೊಂಡ ಸಂಸ್ಥೆಗಳು ಇಲಾಖೆಯಿಂದ ಸರಬರಾಜು ಆದೇಶ(Indent) ಪಡೆದ 10 ದಿನಗಳೊಳಗಾಗಿ ಸರಬರಾಜು ಮಾಡಬೇಕು. ರಾಜ್ಯಾದ್ಯಂತ ಪ್ರತಿ ಸಂಸ್ಥೆಯು ಸರಬರಾಜು ಮಾಡದೇ ಇರುವ ಕನಿಷ್ಠ 10 ಸನ್ನಿವೇಶಗಳು ಕಂಡುಬಂದಲ್ಲಿ ಅಂತಹ ಸಂಸ್ಥೆಗಳನ್ನು ಮುಂದಿನ ಮೂರು ವರ್ಷಗಳವರೆಗೆ ಇಲಾಖೆಯಲ್ಲಿ ಭಾಗವಹಿಸುವಿಕೆಯಿಂದ ಅನರ್ಹಗೊಳಿಸಲಾಗುವುದು ಮತ್ತು ಅನುಮೋದಿತ ಪಟ್ಟಿಯಿಂದ ತೆಗೆದುಹಾಕಲಾಗುವುದು. ಆದ್ದರಿಂದ, ಅನುಮೋದಿತ ಸಂಸ್ಥೆಗಳು ನಿಗಧಿತ ಸಮಯದೊಳಗಾಗಿ ಸರಬರಾಜು ಮಾಡದಿದ್ದಲ್ಲಿ ಅಂತಹ ಸಂಸ್ಥೆಗಳ ಎಲ್ಲಾ ದಾಖಲಾತಿಗಳೊಂದಿಗೆ ವರದಿ ಮತ್ತು ಪ್ರಸ್ತಾವನೆಯನ್ನು ಕೇಂದ್ರ ಕಚೇರಿಗೆ ತಪ್ಪದೇ ಸಲ್ಲಿಸುವುದು.

13. ಅನುಮೋದಿತ ಸಂಸ್ಥೆಗಳು ಗುಣಮಟ್ಟ ಮತ್ತು ಸರಬರಾಜುಗೆ ಸಂಬಂಧಿಸಿದ ನಿಬಂದನೆಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಸಂಸ್ಥೆಗಳನ್ನು ಅನುಮೋದಿತ ಪಟ್ಟಿಯಿಂದ ತೆಗೆದು ಹಾಕಿ ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಆದರಿಂದ ಕಳಪೆ ಗುಣಮಟ್ಟದ ಟಾರ್ಪಲೀನ್ ಸರಬರಾಜು ಮಾಡಿದಲ್ಲಿ ಅಂತಹ ಸಂಸ್ಥೆಗಳ ವರದಿಯನ್ನು ಕೇಂದ್ರ ಕಛೇರಿಗೆ ವರದಿಯನ್ನು ಸಲ್ಲಿಸುವುದು.

**14. ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ವಿತರಿಸಲಾಗುತ್ತಿರುವ ಟಾರ್ಪಲೀನ್ ಗಳ ರೈತರ ವಂತಿಕೆಯನ್ನು, ರೈತರಿಗೆ ವಿತರಿಸಿದ 07 ದಿನಗಳೊಳಗಾಗಿ ಸಂಬಂಧಪಟ್ಟ ಸಂಸ್ಥೆಗಳಿಗೆ ತಪ್ಪದೆ RTGS/NEFT ಮೂಲಕವೇ ಪಾವತಿಸುವುದು.**

15. ಅನುಮೋದಿತ ಸಂಸ್ಥೆಗಳು ಜಿಲ್ಲಾವಾರು ಸರಬರಾಜು ಮಾಡಿದ ವಿವರಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

III. ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳ ವಿತರಣೆ:

ರಾಜ್ಯದಲ್ಲಿ ಎಣ್ಣೆ ಕಾಳು ಬೆಳೆಗಳನ್ನು 12.71ಲಕ್ಷ ಹೆ. ಪ್ರದೇಶದಲ್ಲಿ ಸುಮಾರು 9.70 ಲಕ್ಷ ಟನ್ ಉತ್ಪಾದನೆ ಮತ್ತು 764, ಕೆ.ಜಿ ಪ್ರತಿ ಹೆಕ್ಟೇರ್‌ಗೆ ಇಳುವರಿಯನ್ನು (Source: Economic survey 2017-18) ಪಡೆಯಲಾಗುತ್ತಿದೆ. ಇದರಲ್ಲಿ ಶೇಂಗಾ, ಸೂರ್ಯಕಾಂತಿ ಮತ್ತು ಸೋಯಾ ಬೀನ್ ಅತ್ಯಂತ ಪ್ರಮುಖ ಎಣ್ಣೆ ಕಾಳು ಬೆಳೆಗಳಾಗಿರುತ್ತದೆ. ಇತೀಚಿನ ದಿನಗಳಲ್ಲಿ ಖಾದ್ಯ ತೈಲಗಳಿಗೆ ಬಹಳ ಬೇಡಿಕೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಹಕರು ಪರಿಶುದ್ಧ ಮತ್ತು ಆರೋಗ್ಯ ಪೂರ್ಣ ಸಾವಯವ ಆಧಾರಿತ ವಸ್ತುಗಳ ಬಗ್ಗೆ ಆಸಕ್ತರಾಗಿದ್ದು, ಎಣ್ಣೆ ಕೂಡ ಈ ಪಟ್ಟಿಯಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ ಬೃಹತ್ ಎಣ್ಣೆ ತಯಾರಿಕಾ ಕಂಪನಿಗಳಿಗೆ ಪರ್ಯಾಯವಾಗಿ ರೈತರಿಗೆ ಸಣ್ಣ-ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ನೀಡಿ ಪರಿಶುದ್ಧ ಹಾಗೂ ಆರೋಗ್ಯಪೂರ್ಣ ಎಣ್ಣೆ ಉತ್ಪಾದನೆ ಮಾಡಲು ಪ್ರೋತ್ಸಾಹ ನೀಡಲಾಗುವುದು. ಈ ಪರಿಶುದ್ಧ ಎಣ್ಣೆಯ ಮಾರಾಟಕ್ಕಾಗಿ ನಂದಿನಿ ಮತ್ತು ಇ-ಮಾರ್ಕೆಟಿಂಗ್ ಯೋಜನೆಗಳ ಮಾದರಿಯಲ್ಲಿ ಕಾರ್ಯಕ್ರಮವನ್ನು 2019-20ನೇ ಸಾಲಿನಿಂದ ಆಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳ ವಿತರಣೆ ಯೋಜನೆಯನ್ನು ಪ್ರತ್ಯೇಕವಾಗಿ ಅನುಷ್ಠಾನಗೊಳಿಸಲಾಗುತ್ತಿತ್ತು. ಪ್ರಸ್ತುತ 2020-21ನೇ ಸಾಲಿನಲ್ಲಿ ಲೆ.ಶೀ.2401-00-103-0-15 ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ಒಂದು ಘಟಕವನ್ನಾಗಿ ಅನುಷ್ಠಾನ ಮಾಡುವುದು. ಮುಂದೆ ನೀಡುವ ಜಿಲ್ಲಾವಾರು ಕ್ರಿಯಾ ಯೋಜನೆಯ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

1. ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ಜಿಲ್ಲೆಯಲ್ಲಿ ಎಣ್ಣೆ ಕಾಳು ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ, ರೈತರಿಗೆ, ಮಹಿಳಾ ಸ್ವಸಹಾಯ ಗುಂಪುಗಳಿಗೆ / ರೈತ ಗುಂಪುಗಳಿಗೆ / ಸರ್ಕಾರೇತರ ಸಂಸ್ಥೆಗಳಿಗೆ ಸಾಮಾನ್ಯ ಯೋಜನೆಯಡಿ **ಶೇ.75 ಕ್ಕೆ ಮೀರದಂತೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಗರಿಷ್ಠ ಮಿತಿ ರೂ.ಒಂದು ಲಕ್ಷ** ಮೀರದಂತೆ ಕೇಂದ್ರ ಕಛೇರಿಯ ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳ ವಿತರಣೆ ಯೋಜನೆಯ ದರಕರಾರಿನಲ್ಲಿ ಹೊರಡಿಸಿರುವ ದರಪಟ್ಟಿಯನ್ನೊಳಗೊಂಡ ಸುತ್ತೋಲೆಯನ್ವಯ ಸಹಾಯಧನವನ್ನು ನೀಡುವುದು.
2. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಲೆ.ಶೀ:2401-00-102-0-08 (106,422&423) ಯೋಜನೆಯ ಎನ್.ಎಮ್.ಇ.ಓ ಕಾರ್ಯಕ್ರಮದಡಿ 2.0 HP ವರೆಗಿನ ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ಎಲ್ಲಾ ವರ್ಗದ ರೈತರಿಗೆ ಶೇ.50 ರ ಸಹಾಯಧನದಡಿ ವಿತರಿಸಲು ಅವಕಾಶವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಉಳಿಕೆ ಪೂರಕ/ಹೊಂದಾಣಿಕೆ ಸಹಾಯಧನವನ್ನು ಲೆ.ಶೀ:2401-00-103-0-15 ಅಡಿ ದರಕರಾರು ಆದೇಶ ಸಂಖ್ಯೆ: ಉಕೃನಿ/ ಕೃಯಾಂ.&ಸೂನೀ./SAOM/EOI/2019-20, ದಿ:25/02/2020 ನ ಅನುಮೋದಿತ ದರಗಳನ್ವಯ ನಿಗಧಿಪಡಿಸಿದ ಗರಿಷ್ಠ ಸಹಾಯಧನ ಮಿತಿಗೊಳಪಟ್ಟು ಸಹಾಯಧನವನ್ನು ಭರಿಸುವುದು.

3. ರೈತರಿಗೆ ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ವಿತರಿಸುವುದರ ಜೊತೆಗೆ ಪರಿಶುದ್ಧ ಹಾಗೂ ಆರೋಗ್ಯ ಪೂರ್ಣ ಎಣ್ಣೆಯನ್ನು ಉತ್ಪಾದನೆ ಮಾಡಲು ಸಹಕರಿಸುವುದು. ಈ ಪರಿಶುದ್ಧ ಎಣ್ಣೆ/ ಉತ್ಪಾದನೆಗೆ KOF (Karnataka Co-Operative Oilseeds Growers Federation Limited) ಮತ್ತು ಇ-ಮಾರ್ಕೆಟಿಂಗ್ ಮೂಲಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಕ್ರಮ ವಹಿಸುವುದು.
4. ಇಲಾಖೆಯ ಗಮನಕ್ಕೆ ತರದೆ, ಪೂರ್ವಾನುಮತಿ ಪಡೆಯದೆ ರೈತರು ಸ್ವಂತವಾಗಿ ಖರೀದಿಸಿದ ಉಪಕರಣಗಳಿಗೆ ಸಹಾಯಧನ ನೀಡಲು ಅವಕಾಶವಿರುವುದಿಲ್ಲ. ಈ ಬಗ್ಗೆ ರೈತರು, ರೈತ ಮುಖಂಡರು ಹಾಗೂ ಚುನಾಯಿತ ಜನಪ್ರತಿನಿಧಿಗಳಿಗೆ ಸಮಗ್ರವಾಗಿ ಮಾಹಿತಿಯನ್ನು ನೀಡುವುದರೊಂದಿಗೆ ವ್ಯಾಪಕವಾಗಿ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳುವುದು.
5. ರೈತರು ಸಹಾಯಧನದಡಿ ಸವಲತ್ತನ್ನು ಪಡೆಯಲು ಕಡ್ಡಾಯವಾಗಿ FRUITS (Farmers Registration and Unified Beneficiary Information System) Portal ನಲ್ಲಿ ನೋಂದಾಯಿಸಿಕೊಳ್ಳಬೇಕು. ಕೃಷಿ ಯಾಂತ್ರೀಕರಣ ಯೋಜನೆಯ ಮಾರ್ಗಸೂಚಿಯಂತೆ ಕೆ ಕಿಸಾನ್ ಪೋರ್ಟಲ್ ನಲ್ಲಿ ಅರ್ಜಿ ಹಾಕಿ ಉಳಿದಂತೆ, ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳ ವಿತರಣೆ ಯೋಜನೆಯನ್ನು ಅನುಷ್ಠಾನ ಮಾಡುವುದು.
6. ವಿತರಣೆ ಮಾಡಿದ ಘಟಕಗಳಿಗೆ ಸಂಬಂದ ಪಟ್ಟ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿ ಗಳು **ಕೆ-ಕಿಸಾನ್ ಮೊಬೈಲ್ ಆಪ್** ನಲ್ಲಿ ಅಪ್ ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.
7. ಸದರಿ ಮಾರ್ಗಸೂಚಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಕಾಲಕಾಲಕ್ಕೆ ಮಾಹಿತಿ ನೀಡಲಾಗುವುದು ಹಾಗೂ ಜಿಲ್ಲಾವಾರು ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು

**(ಈ) ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)**

1. 2018-19ನೇ ಸಾಲಿನ SMAM ಪರಿಷ್ಕೃತ ಮಾರ್ಗಸೂಚಿಗಳಲ್ಲಿ ಗರಿಷ್ಠ ಶೇಕಡವಾರು ನಿಗದಿಪಡಿಸಿದ ಸಹಾಯಧನವನ್ನು ಹೆಚ್ಚಿಗೆ ಮಾಡಲಾಗಿರುತ್ತದೆ. ಕೇಂದ್ರ ಸರ್ಕಾರದ SMAM 2018-19ರ ಪರಿಷ್ಕೃತ ಅನುಷ್ಠಾನ ಮಾರ್ಗಸೂಚಿಗಳನ್ವಯ ಸಹಾಯಧನವನ್ನು ಭರಿಸುವುದು.
2. SMAM ಯೋಜನೆಯಡಿ ನೀಡುವ ಉಪಕರಣವಾರು ಸಹಾಯಧನವು ರಾಜ್ಯ ಸರ್ಕಾರ ನಿಗದಿಪಡಿಸಿದ ಗರಿಷ್ಠ ಸಹಾಯಧನ ಮೀರದಂತೆ ಕ್ರಮವಹಿಸುವುದು.ಇಲಾಖೆ ನಿಗದಿಪಡಿಸಿದ ಮಾದರಿವಾರು ಸಹಾಯಧನಕ್ಕಿಂತ SMAM ಯೋಜನೆಯಡಿ ನಿಗಧಿಪಡಿಸಿರುವ ಸಹಾಯಧನವು ಅಧಿಕವಿರುವ ಸನ್ನಿವೇಶಗಳಲ್ಲಿ, ಇಲಾಖೆಯು ನಿಗದಿಪಡಿಸಿದ ಸಹಾಯಧನಕ್ಕೆ ಮಿತಿಗೊಳಿಸುವುದು. ಇಂತಹ ಸನ್ನಿವೇಶಗಳಲ್ಲಿ ರಾಜ್ಯ ಸರ್ಕಾರದ ಹೊಂದಾಣಿಕೆ ಅನುದಾನದ ಅವಶ್ಯಕತೆ ಇರುವುದಿಲ್ಲ.
